# ತಪೋವಾಣಿ

ಸಂ. 10 ಸಂ. 1 ಜನವರಿ 2013 ರೂ.25

ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಶ್ಯಾಮಲಾದೇವಿ**
**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)**

ನಾನು ಹರಡಲು ಪ್ರಯತ್ನಿಸುತ್ತಿರುವ ಈ ಜ್ಞಾನ ಪುಸ್ತಕಗಳಿಂದ ಬಂದುದಲ್ಲ. ಇದನ್ನು ನನ್ನ ಗುರು ನನಗೆ ಕೊಟ್ಟರು. ಅವರು, ನಮಗೆ ವೇದಗಳನ್ನು ಕೊಟ್ಟಿರುವ ಋಷಿಗಳಿಂದ ಇದನ್ನು ಸಂಗ್ರಹಿಸಿದ್ದರು. ಇದು ವಿಕೃತಗೊಂಡಿರದ ಪರಿಶುದ್ಧವಾದ ಜ್ಞಾನ ಎಂದು ನನಗೆ ಗೊತ್ತು.

ಸತ್ಯಕ್ಕೆ ಯಾವುದೇ ಪ್ರಮಾಣಪತ್ರ ಬೇಕಾಗಿಲ್ಲ. ಯಾವುದರ ಆಧಾರ ಬೇಕಾಗಿಲ್ಲ. ಅದು ತನ್ನ ಆಧಾರದ ಮೇಲೆಯೇ ತಾನು ನಿಲ್ಲಬೇಕು ಮತ್ತು ತಂತಾನೇ ಪ್ರಕಾಶಿಸಬೇಕು. ನಾನು ಪ್ರಸಾರ ಮಾಡುತ್ತಿರುವ ಜ್ಞಾನ ಸತ್ಯವಾಗಿದ್ದರೆ ಅದು ತನ್ನ ಮೇಲೆ ತಾನು ನಿಲ್ಲುತ್ತದೆ ಮತ್ತು ತಂತಾನೇ ಪ್ರಕಾಶಿಸುತ್ತದೆ.

ನನ್ನ ಕೆಲಸ ಮತ್ತು ಯೋಜನೆಗಳ ಬಗ್ಗೆ ಹೇಳುವಾಗ, ಜನರು ನನ್ನನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಆಗುವಂತೆ ನಾನು ನನ್ನ ಬಗ್ಗೆ ಏನನ್ನೂ ತಿಳಿಸಿಲ್ಲ ಎಂದುಕೊಂಡಿದ್ದೇನೆ. ಈ ಕೆಲಸ ಕಷ್ಟ, ಕಾರಣ ಕೆಲವು ಅಂಶಗಳನ್ನು ನಾನು ಈಗ ಹೊರಗೆಡವಲಾಗುವುದಿಲ್ಲ. ಹೀಗಾಗಿ, ಮಾನವಸಹಜ ಸಾಮಾನ್ಯ ಜ್ಞಾನ ಸ್ಪಷ್ಟ ಗೆರೆಗಳನ್ನು ಎಳೆಯಬಹುದಾದ ಅಂಶದ ಮೇರೆಗೆ ನಾನು ಜನರಿಗೆ ಮುಗ್ಧ ಮತ್ತು ಅವಾಸ್ತವಿಕವಾಗಿ ಕಾಣುತ್ತೇನೆ. ಆಧ್ಯಾತ್ಮಿಕ ನಿರ್ಬಂಧಗಳು ಕೆಲವುಬಾರಿ ತರ್ಕ ಮತ್ತು ಸಮರ್ಥನೆಗಳೊಂದಿಗೆ ಮೇಳೈಸುವುದಿಲ್ಲ.

ನನ್ನ ಸುತ್ತಲಿರುವ ಸಾಧಕರು ತೋರಿಸಿರುವ ವಾತ್ಸಲ್ಯ ಮತ್ತು ಭಕ್ತಿಗಳು ನನ್ನನ್ನು ಆಳವಾಗಿ ತಟ್ಟಿವೆ. ಮತ್ತು ಅವರಲ್ಲಿ ಆಳವಾದ ಪ್ರೀತಿ ಮತ್ತು ತುಂಬಿತುಳುಕುತ್ತಿರುವ ಜೀವಶಕ್ತಿ ಇದೆ. ಇದು ನನ್ನ ಕೆಲಸದಲ್ಲಿ ನನಗೆ ಅಗಾಧವಾದ ತೃಪ್ತಿ ಮತ್ತು ಸಂತೋಷವನ್ನು ಕೊಟ್ಟಿದೆ.

ಬತ್ತಿರುವ ತುಟಿಯ ಮೇಲೊಂದು ಕಿರುನಗೆ, ಕುಗ್ಗಿರುವ ಮುಖದಲ್ಲೊಂದು ಹೊಳಪು ಮತ್ತು ಕತ್ತಲಾಗಿರುವ ಹೃದಯದಲ್ಲೊಂದು ಭರವಸೆ ಇವು ಟೊಳ್ಳು ಆಶ್ವಾಸನೆಗಳಿಂದ ಅಥವಾ ದೂರದ ಬಿಸಿಲ್ಗುದುರೆಗಳಿಂದ ಉದಯಿಸಿಲ್ಲ, ಬದಲಿಗೆ ಬದುಕನ್ನು ಎದುರಿಸಲು ಹೊಸದಾಗಿ ಕಂಡುಕೊಂಡ ಧೈರ್ಯದಿಂದ ಮತ್ತು ದೈವದಲ್ಲಿ ಸಶಕ್ತಗೊಂಡ ನಂಬಿಕೆಯಿಂದ ಉದಯಿಸಿವೆ. ಇವು ನಾನು ನನ್ನ ಮುಂದಿನ ಮಿಲಿಯನ್ ಜೀವಿತಗಳನ್ನು ಕೆಲಸಕ್ಕಾಗಿ ಮುಡಿಪಾಗಿಡಲು ನನ್ನನ್ನು ಪ್ರೇರೇಪಿಸುತ್ತವೆ.

ಶಾಲಾ ವಿದ್ಯಾರ್ಥಿಯೊಬ್ಬ ಅವನ ನೋಟ್‌ಬುಕ್ ಕರೆಕ್ಟ್ ಮಾಡಲು ನನಗೆ ಕೊಟ್ಟ, ನಾನು ಅದನ್ನು ಪರಿಶೀಲಿಸಿ ಹಿಂದಿರುಗಿಸಿದೆ. ಕೆಲವು ದಿನಗಳ ನಂತರ ಅವನು, ನಾವು ಯಾರನ್ನೇ ಆಗಲಿ ಸಂಪೂರ್ಣವಾಗಿ ನಂಬಬಾರದು ಎಂಬ ಒಂದು ಆಲೋಚನೆ ಸುಳಿದಿದೆ, ಎಂದು ನನ್ನ ಮುಂದೆ ಹೇಳಿದ. ನನಗದು ಅರ್ಥವಾಗಲಿಲ್ಲ, ಅದರ ವಿಸ್ತರಣೆಗಾಗಿ ಕಾದೆ. ನಾನು ಒಂದು ತಪ್ಪನ್ನು ತಿದ್ದಿರಲಿಲ್ಲ ಎಂದು ಅವನು ಹೇಳಿದ. ಮತ್ತು ನನ್ನ ಕಾರ್ಯದಕ್ಷತೆಯ ಬಗ್ಗೆ ಅವನು ಸಂಪೂರ್ಣ ನಂಬಿಕೆ ಇಟ್ಟಿದ್ದ! ನಾನು ಸಣ್ಣ ದನಿಯಲ್ಲಿ ಉತ್ತರಿಸಿದೆ...'ಕಣ್ತಪ್ಪಿದೆ'.

ಆ ಘಟನೆಯನ್ನು ಸುಲಭವಾಗಿ ಪಕ್ಕಕ್ಕಿಡಲು ನನಗಾಗಲಿಲ್ಲ. ಮತ್ತು ಅದರ ಬಗ್ಗೆ ಹಲವಾರು ಬಾರಿ ಅವಲೋಕಿಸಿದೆ. ವಿದ್ಯಾರ್ಥಿ ತನ್ನ ಮಾಸ್ಟರ್ ಪರಿಪೂರ್ಣ ಎಂಬ ದೃಷ್ಟಿಯಿಂದ ಅವನನ್ನು ನೋಡುತ್ತಾನೆ. ಮಾಸ್ಟರ್ ಎಂದೂ ಜಾರಬಾರದು. ಒಬ್ಬ ಮಾಸ್ಟರ್‌ನ ಪಾತ್ರ-ನಿರ್ವಹಣೆಯಲ್ಲಿ ಯಾವುದೇ ಜಾರಿಕೆಗೆ ಅವಕಾಶವಿಲ್ಲ. ಒಂದು ಚಿಕ್ಕ ತಪ್ಪಿದ್ದರೂ ಪರಿಪೂರ್ಣತೆ ಪರಿಪೂರ್ಣತೆಯಾಗಿ ಉಳಿಯುವುದಿಲ್ಲ.

ನನ್ನ ವೈಯಕ್ತಿಕ ಜೀವನದ ಬಗೆಗಿನ ಕೆಲವು ವಿಷಯಗಳನ್ನು ಪ್ರಿಂಟ್ ಮಾಡಿರುವುದರ ಬಗ್ಗೆ ನನ್ನ ಇಬ್ಬರು ಹಳೇ ಸ್ನೇಹಿತರು ತಮ್ಮ ಆಕ್ಷೇಪ ವ್ಯಕ್ತಪಡಿಸಿದರು. ನಾನು ಅದರ ಬಗ್ಗೆ ಆಳವಾಗಿ ಚಿಂತನೆ ಮಾಡುವಂತೆ ಮಾಡಿದರು. ಆತ್ಮಕಥನ ಟಿಪ್ಪಣಿಗಳು ಅವ್ಯೆಯಕ್ತಿಕವಾಗಿರಲು ಸಾಧ್ಯವಿಲ್ಲ. ನಾನು ಸಾಂಪ್ರದಾಯಿಕ ರೀತಿಯ ಸನ್ಯಾಸಿಯಲ್ಲ. ನಾನು ಕಾವಿ ಧರಿಸುವುದಿಲ್ಲ. ಯಾವುದೇ ಢಂಬಾಚಾರಗಳಿಲ್ಲದ ನಾನು ಒಬ್ಬ ಸಾಧಕ. ಈಗ, ನನಗೆ ವೈಯಕ್ತಿಕ ಮತ್ತು ಆಧ್ಯಾತ್ಮಿಕಗಳ ನಡುವೆ ಯಾವ ಗೆರೆಗಳೂ ಕಾಣಿಸುವುದಿಲ್ಲ. ಮುಚ್ಚಿಡಲು ಅಥವಾ ತೆರೆದು ತೋರಿಸಲು ನನ್ನಲ್ಲಿ ಏನೂ ಇಲ್ಲ. ಯಾವ ದೂರುಗಳೂ, ಯಾವ ವಿಷಾದಗಳೂ ನನ್ನಲ್ಲಿಲ್ಲ. ನಾನು ಇರುವಂತೆಯೇ ಸಂತೋಷವಾಗಿದ್ದೇನೆ. ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/– ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಅಂತರ್ ಮಾನಸದಲ್ಲಿರುವ ಈ ಪ್ರಾರ್ಥನಾ ಮಂದಿರದಲ್ಲಿ ಗುರೂಜಿಯವರ ಪವಿತ್ರ ಚಿತಾಭಸ್ಮವನ್ನು ಡಿಸೆಂಬರ್ 14, 2012 ರಂದು ಇಡಲಾಯಿತು.

### ಸುದ್ದಿ–ಸೂಚನೆ

- 23–11–2012 ರಂದು ಬೆಳಿಗ್ಗೆ ಗುರೂಜಿಯವರು ಮಹಾಸಮಾಧಿ ಹೊಂದಿದರು. ಸಾವಿರಾರು ಜನರು ಅವರ ಅಂತಿಮ ದರ್ಶನಕ್ಕಾಗಿ ಆಗಮಿಸಿದ್ದರು ಮತ್ತು ಅವರಿಗೆ ತಮ್ಮ ಅಂತಿಮ ನಮನವನ್ನು ಸಲ್ಲಿಸಿದರು.
- 24–11–2012 ರಂದು ಮಧ್ಯಾಹ್ನ 12 ಗಂಟೆಗೆ ತಪೋವನದಲ್ಲಿ ಸುಮಾರು ಒಂದು ಸಾವಿರ ಜನರು ಅವರ ದೇಹ ಸಂಸ್ಕಾರದ ಕಾರ್ಯಕ್ರಮದಲ್ಲಿ ಸೇರಿ ಪ್ರಾರ್ಥಿಸಿದರು ಮತ್ತು ಅವರಿಗೆ ಬೆಳಕನ್ನು ಹರಿಸಿದರು.
- ಅವರ ದೇಹ ಸಂಸ್ಕಾರ ಮಾಡಿದ ಸ್ಥಳದಲ್ಲಿ ಒಂದು ಪಿರಮಿಡ್ ಆಕಾರದ ಕಟ್ಟಡವನ್ನು ನಿರ್ಮಿಸಲಾಗಿದೆ.
- ಪವಿತ್ರ ಚಿತಾಭಸ್ಮವನ್ನು ತಪೋವನದಲ್ಲಿರುವ ಪಿರಮಿಡ್ ಆಕಾರದ ಕಟ್ಟಡದಲ್ಲಿ ಮತ್ತು ಅಂತರ್‌ಮಾನಸದಲ್ಲಿ ಇರಿಸಲಾಯಿತು.
- 28–11–2012 ರಂದು ತಪೋನಗರದಲ್ಲಿ ಚಂದ್ರಗ್ರಹಣದ ವಿಶೇಷ ಧ್ಯಾನದಲ್ಲಿ 150ಕ್ಕೂ ಹೆಚ್ಚು ಧ್ಯಾನಿಗಳು ಸೇರಿ ಧ್ಯಾನ ಮಾಡಿದರು.

### ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ನವೆಂಬರ್ 2012 ರಲ್ಲಿ ನಮ್ಮ ಕಾರ್ಯಕರ್ತರು 400ಕ್ಕೂ ಹೆಚ್ಚು ಲೈಟ್ ಚಾನಲ್ ಸೆಷನ್‌ಗಳನ್ನು ನಡೆಸಿದರು. 1,30,000 ಕ್ಕೂ ಹೆಚ್ಚು ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸಿದ್ದಾರೆ.
- ಸುಮಾರು 23 ಲಕ್ಷಕ್ಕೂ ಹೆಚ್ಚು ಮಕ್ಕಳು ಇಲ್ಲಿಯವರೆಗೆ ಕನಿಷ್ಟಪಕ್ಷ ಒಂದು ಬಾರಿಯಾದರೂ ಲೈಟ್ ಚಾನಲ್ ಮಾಡಿದ್ದಾರೆ ಮತ್ತು ಸುಮಾರು ಅರ್ಧ ಮಿಲಿಯನ್ ಮಕ್ಕಳು ಸಾವಿರಾರು ಶಾಲೆಗಳಲ್ಲಿ ಪ್ರತಿನಿತ್ಯ ಲೈಟ್ ಚಾನಲಿಂಗ್ ಮಾಡುತ್ತಿದ್ದಾರೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಶನಿ | ಕೃಷ್ಣ ಅಷ್ಟಮಿ |
| 10 | ಗುರು | ಮಾಸ ಶಿವರಾತ್ರಿ |
| 11 | ಶುಕ್ರ | ಅಮಾವಾಸ್ಯೆ |
| 14 | ಸೋಮ | ಉತ್ತರಾಯಣ ಆರಂಭ ಮಕರ ಸಂಕ್ರಾಂತಿ |
| 19 | ಶನಿ | ಶುಕ್ಲ ಅಷ್ಟಮಿ |
| 21 | ಸೋಮ | ಶುಕ್ಲ ದಶಮಿ |
| 27 | ಭಾನು | ಪೂರ್ಣಿಮಾ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11–12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12–1 |
| 13–01–13 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 20–01–13 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |

ಪ್ರಪಂಚದೆಲ್ಲೆಡೆ ವಾಸಿಸುತ್ತಿರುವ ಅನೇಕ ಧ್ಯಾನಿಗಳು ಗುರೂಜಿಯವರಿಗೆ ತಮ್ಮ ಹೃದಯಾಂತರಾಳದಿಂದ ಅಭಿವಂದನೆಗಳನ್ನು ಸಲ್ಲಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಧನ್ಯವಾದಗಳು.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದು.

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ ; ಅನು: ಪಾಂಡುರಂಗ**

ಗುರೂಜಿಯವರು ಅಭೌತಿಕ ಆಯಾಮಕ್ಕೆ ಪ್ರಯಾಣ ಮಾಡಿರುವ ಇಂಥ ನೋವಿನ ಸನ್ನಿವೇಶದಲ್ಲೂ ಕೂಡಾ ಮಾನಸ ಫೌಂಡೇಶನ್ ಧ್ಯಾನಿಗಳು ಗುರೂಜಿಯವರ ಘನತೆಗೆ ಕುಂದುಬರದಂತೆ ನಡೆದುಕೊಳ್ಳುವಲ್ಲಿ ಗೆಲುವು ಸಾಧಿಸಿದರು. ನವೆಂಬರ್ 23ರಂದು ಗುರೂಜಿಯವರು ಕೊನೆಯುಸಿರೆಳೆದರು. ಅವರ ಆತ್ಮದ ದೇಗುಲವಾಗಿದ್ದ ಅವರ ಭೌತಿಕ ಶರೀರವನ್ನು ಮನೆಗೆ ತರುತ್ತಿದ್ದ ಸಂದರ್ಭದಲ್ಲಿ ತಪೋನಗರ ನಿವಾಸಿಗಳೆಲ್ಲರಿಗೂ ಒಟ್ಟುಸೇರಲು ಹೇಳಿದರು. ಒಂದು ಸಾಧಾರಣ ಹಳ್ಳಿಯ ವಾತಾವರಣದಿಂದ ಬಂದಿರುವ ಮುನಿಕೃಷ್ಣ, ಗುರೂಜಿಯವರ ನಿರ್ಮಾಣ ಕಾರ್ಯದಲ್ಲಿ ನಂಬಿಕಸ್ಥ ಸಹಾಯಕರಾಗಿ ಹಲವಾರು ವರ್ಷಗಳಿಂದ ಬೆಳೆದವರು. ಗುರೂಜಿಯವರು ಹೇಳಿದ್ದ ರೀತಿಯಲ್ಲಿ ಅವರು ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದರು. ನಮ್ಮ ಕಾರ್ಯಕರ್ತರು ಅದಾಗಲೇ ತಲುಪಿದ್ದರು ಮತ್ತು ಗೌರವಯುತ ಮೌನದೊಂದಿಗೆ ತಪೋನಗರ ಗುರೂಜಿಯವರನ್ನು ಬರಮಾಡಿಕೊಂಡಿತು.

ಗುರೂಜಿಯವರ ಅಂತಿಮ ದರ್ಶನಕ್ಕಾಗಿ ವಿಶ್ವಚೇತನ ಮಂದಿರದ ಮುಂಭಾಗದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಗುರೂಜಿಯವರ ದರ್ಶನದ ಅವಧಿಯನ್ನು 30 ಘಂಟೆಗಳವರೆಗೆ ವಿಸ್ತರಿಸಿದ್ದು, ಇತರ ನಗರಗಳಿಂದ ಬರುವವರಿಗೆ ಅಂತಿಮ ನಮನ ಸಲ್ಲಿಸುವುದಕ್ಕಾಗಿ ಅನುಕೂಲ ಮಾಡಿಕೊಡಲಾಗಿತ್ತು. ಮುಂಬೈ, ದೆಹಲಿ, ಪೂನಾ, ಚೆನ್ನೈ ಇನ್ನಿತರ ನಗರಗಳಿಂದ ಅನೇಕರು ಧಾವಿಸಿ ಬಂದರು. ಅವರಿಗೆ ಗೌರವಾರ್ಪಣೆ ಸಲ್ಲಿಸಲು ಬಂದ ಸ್ಥಳೀಯ ನಾಗರೀಕರು, ಉನ್ನತ ಸ್ಥಾನದ ರಾಜಕಾರಣಿಗಳು, ಧ್ಯಾನಿಗಳು, ಗುರೂಜಿಯವರ ಪರಿಚಯವುಳ್ಳವರು ಹೀಗೆ ಪ್ರತಿಯೊಬ್ಬರೂ ತಮ್ಮ ಮನದಾಳದ ಭಾವನೆಗಳನ್ನು ಭಾವಪೂರ್ಣ ಕಣ್ಣೀರು ಮತ್ತು ಗೌರವಾದರದ ಮೌನದ ಮೂಲಕ ವ್ಯಕ್ತಪಡಿಸಿದರು. ಸೇವೆಯಲ್ಲಿ ನಿರತರಾಗಿದ್ದ ಅನೇಕರಿಗೆ, ಅವರು ಶರಣಾಗತ ಭಾವನೆಯೊಂದಿಗೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದಾಗ, ಗುರೂಜಿಯವರ ಶರೀರದಿಂದ ಬೆಳಕು ಬರುತ್ತಿರುವಂತೆ ಮತ್ತು ಆಶೀರ್ವದಿಸುತ್ತಿರುವಂತೆ ಅನುಭವವಾಯಿತು. ಪ್ರತಿಯೊಬ್ಬರಿಗೂ ಗುರೂಜಿಯವರ ಶರೀರ ಜೀವಂತಿಕೆಯಿಂದ ಇದ್ದು, ಅವರು ಯಾವ ಕ್ಷಣದಲ್ಲಾದರೂ ಎದ್ದೇಳಬಹುದೇನೋ ಎಂದು ಭಾಸವಾಗುತ್ತಿತ್ತು. ಸಂಸ್ಕಾರ ಕಾರ್ಯದ ಹಿಂದಿನ ಇಡೀ ರಾತ್ರಿ, ಕಾರ್ಯಕರ್ತರು ಸರದಿಯಲ್ಲಿ ಪವಿತ್ರಸ್ಥಳವನ್ನು ಸುವ್ಯವಸ್ಥಿತ ರೀತಿಯಲ್ಲಿ ನೋಡಿಕೊಂಡರು. ಯಾರೂ ಅಡುಗೆ ಮಾಡುವ ಮನಸ್ಥಿತಿಯಲ್ಲಿ ಇಲ್ಲದಿದ್ದುದರಿಂದ, ಪೂರ್ವಯೋಜನೆಯಿಲ್ಲದೆ ಕೆಲವು ಮಹಿಳೆಯರು ಸೇರಿ ತಪೋನಗರ ನಿವಾಸಿಗಳಿಗೆ ಸರಳ ಆಹಾರ ಒದಗಿಸಿದರು. ಒಂದು ದೊಡ್ಡ ಕುಟುಂಬದ ಹಾಗಿದ್ದ ಮಾನಸದಲ್ಲಿ ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡುತ್ತಿದ್ದರು. ಕಾಕತಾಳೀಯವೆಂಬಂತೆ ಅಂದಿನ ಅಡುಗೆಯಲ್ಲಿ ಗುರೂಜಿಯವರ ಅಚ್ಚುಮೆಚ್ಚಿನ ಆಹಾರವಿದ್ದುದು ವಿಶೇಷತೆಯಾಗಿತ್ತು.

ಅದೇ ಸಮಯದಲ್ಲಿ, ಕೆಲವು ಕಾರ್ಯಕರ್ತರು, ಮುನಿಕೃಷ್ಣ ಮತ್ತು ಅವರ ಹಳ್ಳಿಯ ಸಹಾಯಕ ತಂಡ ತಪೋವನದಲ್ಲಿ ಪವಿತ್ರ ಚಿತೆಯ ಸಿದ್ಧತೆ ನಡೆಸುತ್ತಿದ್ದರು.

ಮಾರನೇ ದಿನ 12 ಘಂಟೆಗೆ ದೇಹ ಸಂಸ್ಕಾರವನ್ನು ನಿಗದಿಪಡಿಸಲಾಗಿತ್ತು. ಆದ್ದರಿಂದ ಅಂದು ಬೆಳಿಗ್ಗೆ 11.30ಕ್ಕೆ ಗುರೂಜಿಯವರ ದೇಹವನ್ನು ತಪೋವನದೆಡೆಗೆ ಒಯ್ಯಲು ವಿಧ್ಯುಕ್ತ ಮೆರವಣಿಗೆ ಆರಂಭವಾಯಿತು. ಗುರೂಜಿಯವರ ಪ್ರಮುಖ ಶಿಸ್ತುಗಳಲ್ಲಿ ಒಂದಾದ ಸಮಯ ಪರಿಪಾಲನೆಯನ್ನು ಆ ದಿನ ಸಂಪೂರ್ಣವಾಗಿ ಪಾಲಿಸಲಾಗಿತ್ತು. ಸಂಸ್ಕಾರ ಕ್ರಿಯೆಯನ್ನು ನೋಡಲು ನೂರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಹಿಂದಿನ ದಿನ ಮಳೆಯಾಗಿತ್ತು; ಪ್ರಕೃತಿಯೂ ತನ್ನ ನಮನಗಳನ್ನು ಸಲ್ಲಿಸುತ್ತಿದೆಯೇನೋ ಎಂಬಂತೆ ವಾತಾವರಣವೂ ಮಳೆಯಿಂದ ಮುಕ್ತವಾಗಿತ್ತು. ಆದರೂ ನಮ್ಮ ದುಃಖವನ್ನು ಸಾಂತ್ವನಗೊಳಿಸುವಷ್ಟು ಮೋಡಗಳಿದ್ದವು. ಯಾವುದೇ ಧಾರ್ಮಿಕ ವಿಧಿಗಳಿಲ್ಲದೇ ಸರಳ ಮತ್ತು ಘನತೆಯಿಂದ ಸಂಸ್ಕಾರ ಮಾಡಲಾಯಿತು. ಇದರೊಂದಿಗೆ ನಂತರದ ಕೆಲ ಘಂಟೆಗಳವರೆಗೆ ಗೌರವ ಸೂಚಿಸುವಂತೆ ಅಲ್ಲಿ ಕೇವಲ ಮೌನ ಮನೆಮಾಡಿತ್ತು. ಅಗ್ನಿ ಸ್ಪರ್ಶವಾದಂತೆ ಗುರೂಜಿಯವರ ಭೌತಿಕ ಶರೀರ ತಪೋನಗರದಲ್ಲಿ ಶಾಶ್ವತವಾಗಿ ಐಕ್ಯವಾಯಿತು.

ಮರುದಿನದ ಭಾನುವಾರದ ತರಗತಿಗಾಗಿ ಮೆಡಿಟೇಶನ್ ಹಾಲ್, ಡೈನಿಂಗ್ ಹಾಲ್, ಆಫೀಸ್ ಮತ್ತು ಸುತ್ತಲಿನ ಆವರಣಗಳನ್ನು ಸ್ವಚ್ಛಗೊಳಿಸಿ ಅಣಿಗೊಳಿಸಬೇಕಿತ್ತು. ಚೇತರಿಸಿಕೊಂಡ ಕಾರ್ಯಕರ್ತರು ತಮ್ಮ ಕಣ್ಣೀರನ್ನು ಒರೆಸಿಕೊಳ್ಳುತ್ತಾ, ತುಟಿಗಳಲ್ಲಿ ನಗೆಸೂಸುತ್ತಾ ಕಾರ್ಯೋನ್ಮುಖರಾದರು. ನಾಲ್ಕು ದಿನಗಳ ನಂತರವೇ ಗುರೂಜಿಯವರ ಪವಿತ್ರ ಚಿತಾಭಸ್ಮವನ್ನು ಸಂಗ್ರಹಿಸಬೇಕಾದ್ದರಿಂದ ತಪೋನಗರ ನಿವಾಸಿಗಳು ಚಳಿಗಾಲದ ಕೊರೆಯುವ ರಾತ್ರಿಗಳಲ್ಲಿ ಪವಿತ್ರ ಸ್ಥಳವನ್ನು ಕಾವಲು ಕಾಯುತ್ತಿದ್ದರು. ನಕ್ಷತ್ರಗಳ ಕೆಳಗೆ ತಮ್ಮ ಮಾಸ್ಟರ್ ಪಕ್ಕದಲ್ಲಿ ಅವರು ಧ್ಯಾನನಿರತರಾಗಿದ್ದರು.

ತನ್ನದೇ ಮೂಲವಾದ ಹೂವು ಅರಳುವುದನ್ನು ಬೀಜ ನೋಡುವುದಿಲ್ಲ; ಹಾಗಿದ್ದರೂ ಪ್ರತಿಯೊಬ್ಬರ ಹೃದಯಗಳಲ್ಲೂ ಗುರೂಜಿಯವರು ನೆಲೆಸಿ, ಪ್ರತಿಕ್ಷಣದ ಚಟುವಟಿಕೆಗಳನ್ನೂ ಗಮನಿಸುತ್ತಿದ್ದುದರ ಅನುಭವ ಎಲ್ಲರಿಗೂ ಆಯಿತು. ಗುರೂಜಿಯವರು ಕಲಿಸಿಕೊಟ್ಟ ಏಕತೆ, ಸಹಕಾರ, ಶಾಂತತೆ ಮತ್ತು ಋಷಿಗಳ ಸೇವೆಯಲ್ಲಿ ಸಮರ್ಪಣಾಭಾವ ಇವೆಲ್ಲವನ್ನು ಪ್ರತಿಯೊಬ್ಬರೂ ಅಭಿವ್ಯಕ್ತಿಸುತ್ತಿದ್ದರು. ■

## ಲೈಟ್ ಚಾನಲ್ಸ್

ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಜಯಂತ್ ದೇಶ್‌ಪಾಂಡೆಯವರ ಭಾನುವಾರದ ಉಪನ್ಯಾಸಗಳ ಆಯ್ದ ಭಾಗಗಳು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

04–11–2012

ಒಬ್ಬ ಪ್ರಾಮಾಣಿಕ ಗುರು ಮಾನವ ಮಟ್ಟದ ಎಲ್ಲ ತತ್ವಗಳನ್ನು ಮತ್ತು ಉನ್ನತ ತತ್ವಗಳನ್ನು ಕೂಡಾ ಅನುಸರಿಸುತ್ತಾನೆ. ತನ್ನ ಬಳಿಗೆ ಯಾರು ಬಂದರೂ ಕೂಡಾ ಮಾರ್ಗದರ್ಶಿಸುತ್ತಾನೆ ಮತ್ತು ತನ್ನ ಪ್ರೀತಿಯನ್ನು ಹಂಚುತ್ತಾನೆ.

ಗುರೂಜಿಯವರು ಪ್ರಾಸಂಗಿಕವಾಗಿ ಹೇಳಿದರು, ‘ನಾನು ಅನೇಕ ಶಿಲುಬೆಗಳನ್ನು ಹೊರುತ್ತಿದ್ದೇನೆ.’ ನಾವು ನಡೆಯಲು ಮತ್ತು ನಮ್ಮ ಶಿಲುಬೆಗಳನ್ನು ಹೊರಲು ಕಲಿಯುವವರೆಗೂ ನಾವೆಲ್ಲಾ ಒಂದು ರೀತಿ ಅವರ ಶಿಲುಬೆಗಳು. ಒಮ್ಮೆ ಅವರು ಕ್ರಿಸ್ತನೊಡನೆ ಸಂಪರ್ಕದಲ್ಲಿದ್ದಾಗ ಕ್ರಿಸ್ತನು ‘ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಮೋಸ ಮಾಡಿದರೆ ಅವನು ನನ್ನನ್ನು ಶಿಲುಬೆಗೇರಿಸಿದಂತೆ’ ಎಂದು ಹೇಳಿದನಂತೆ. ನಾವು ಒಂದು ಕ್ಷಣ ನಿಂತು ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಂಡು ನಮ್ಮನ್ನು ತಿದ್ದಿಕೊಳ್ಳಬೇಕು.

ನಾವು ಏಕಾಂಗಿಯಾಗಿದ್ದಾಗ ನಮ್ಮ ಮನಸ್ಸಿನಲ್ಲಿ ಏನಾಗುತ್ತದೆ ಎಂಬುದು ಬಹಳ ಮುಖ್ಯ. ಅದು ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಸೂಚಿಸುತ್ತದೆ ಎಂದು ಗುರೂಜಿಯವರು ಹೇಳಿದ್ದಾರೆ.

ಒಮ್ಮೆ ತಪೋನಗರ ನಿವಾಸಿಗಳ ಕೂಟದಲ್ಲಿ ಗುರೂಜಿಯವರು, ನಮ್ಮ ಜೀವನದ ಎಲ್ಲಾ ಭಾಗಗಳಲ್ಲಿ ಏರಿಳಿತಗಳಿವೆ ಎಂದು ಹೇಳಿದರು. ಅದು ಸ್ವಾಭಾವಿಕ. ನಾವು ದೇವರನ್ನು ನಂಬಿ ಅವನು ನಮ್ಮನ್ನು ಪ್ರೀತಿಸುತ್ತಾನೆಂದು ಅರಿತರೆ, ನಾವು ಏನನ್ನು ಬೇಕಾದರೂ ಒಪ್ಪಿಕೊಳ್ಳಬಹುದು. ಅವರು ಆಧ್ಯಾತ್ಮಿಕ ಮತ್ತು ಲೌಕಿಕ ಎಂಬುದು ಇಲ್ಲವೆಂದು ಕೂಡ ಹೇಳಿದರು.

‘ಋಷಿಗಳು ವಿನಾಶವನ್ನುಂಟುಮಾಡುತ್ತಾರೆಯೆ?’ ಎಂಬ ಪ್ರಶ್ನೆ ಕೇಳಲಾಯಿತು. ನಾವು ಬೆಳೆಯಲು ಮತ್ತು ಬದಲಾಗಲು ಋಷಿಗಳು ಅಗಾಧ ಜ್ಞಾನ ಮತ್ತು ಚೈತನ್ಯಗಳನ್ನು ರವಾನಿಸಿದ್ದಾರೆ. ನಾವು ಆಧ್ಯಾತ್ಮೀಕರಣಗೊಂಡರೆ ನಾಶದ ಅಗತ್ಯ ಬರುವುದಿಲ್ಲ.

ಗುರೂಜಿಯವರು ಹೇಳುತ್ತಾರೆ ಧ್ಯಾನ ಒಂದು ಅತ್ಯಂತ ಗಂಭೀರವಾದ ಅಭ್ಯಾಸ, ಮುಕ್ತಿಯನ್ನು ಗಳಿಸುವ ಒಂದು ರೀತಿಯ ಜೀವನ, ಗಂಭೀರವಾದ ವಿಷಯ ಕೂಡಾ. ದೀಕ್ಷೆ ಇನ್ನೂ ಗಂಭೀರವಾದುದು. ಋಷಿಗಳು ಸಾವಿರಾರು ವರ್ಷಗಳು ತಪಸ್ಸು ಮಾಡಿ, ತಪಃಶಕ್ತಿಯನ್ನು ಪಡೆದು ದೀಕ್ಷೆಯ ಕಾಲದಲ್ಲಿ ರವಾನಿಸುವರು. ತಪಃಶಕ್ತಿ ಮುಗಿದು ಹೋದ ಮೇಲೆ ಅವರು ಮತ್ತೆ ತಪಸ್ಸಿಗೆ ಕುಳಿತು ಚೈತನ್ಯಗಳನ್ನು ಪಡೆಯುವರು. ಆದ್ದರಿಂದ ದೀಕ್ಷೆ ಅತ್ಯಂತ ಪವಿತ್ರವಾದುದು.

ಧ್ಯಾನದಲ್ಲಿ ನಮ್ಮ ಜಾಗೃತಿ ವಿಸ್ತೃತವಾಗುತ್ತದೆ. ನಾವು ವಿಸ್ತೃತವನ್ನು ನಮ್ಮ ಜೀವನದ ಎಲ್ಲ ಹಂತಗಳಲ್ಲಿ ಪ್ರಕಟವಾಗುವಂತೆ ಅನುಮತಿಸಬೇಕು. ಅದು ನಮ್ಮ ಸಾಧನೆಯ ಒಂದು ಭಾಗ ಕೂಡಾ. ಈ ಅಭ್ಯಾಸ, ನಾವು ಧ್ಯಾನ ಮಾಡಿದಾಗಲೆಲ್ಲಾ ವಿಸ್ತಾರವಾಗಲು ಸಹಾಯ ಮಾಡುತ್ತವೆ. ಒಳಗಿನ ಮತ್ತು ಹೊರಗಿನ ವಿಸ್ತಾರಗಳು ಅಂತರ್ ಸಂಪರ್ಕಗೊಂಡಿರುತ್ತವೆ.

ಧ್ಯಾನದಲ್ಲಿ ನಾವು ಚಕ್ರಗಳ ಬಗ್ಗೆ ಅರಿವಿನಿಂದಿರಬೇಕು, ಆದರೆ ಅವುಗಳನ್ನು ನೋಡಬೇಕಾಗಿಲ್ಲ. ಋಷಿಗಳ ಕೃಪೆಯಿಂದ ಚಕ್ರಗಳು ಚೇತನಗೊಂಡು, ಬೆಳಕನ್ನು ಅನುಭವಿಸಲು ಸಹಾಯವಾಗುತ್ತದೆ.

ಹೋರಾಟಗಳು ಮತ್ತು ಸೋಲುಗಳು ಈ ಭೂಮಿಯ ಮೇಲೆ ಸಂಭವಿಸುವ ವೈಶಿಷ್ಟ್ಯಗಳು ಎಂದು ಗುರೂಜಿಯವರು ಹೇಳುತ್ತಾರೆ. ಇಂಥವುಗಳನ್ನು ಅನುಭವಿಸಲು ಬೇರೆ ಗ್ರಹದ ಜನರು ಇಲ್ಲಿ ಜನಿಸುತ್ತಾರೆ.

ಒಬ್ಬ ವ್ಯಕ್ತಿ ಕೇಳಿದರು, ‘ಅರ್ಧ ಮನಸ್ಸಿನಿಂದ ಏನಾದರು ಕೆಲಸ ಮಾಡಿದರೆ ನಾವು ಕರ್ಮಗಳನ್ನು ಪಡೆಯುತ್ತೇವೆಯೇ?’ ಗುರೂಜಿ ಹೇಳಿದರು, ‘ನಾವು ಕರ್ಮಗಳನ್ನು ಪಡೆಯುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ, ಆದರೆ ಅದು ಆಧ್ಯಾತ್ಮಿಕವಾಗಿ ಸೂಕ್ತವಲ್ಲ. ನಾವು ಏನು ಮಾಡಿದರೂ ಅತ್ಯಂತ ಪ್ರಾಮಾಣಿಕವಾಗಿ ಮಾಡಬೇಕು.’

ಗುರೂಜಿಯವರು, ‘ನಾನು ಇಲ್ಲಿಗೆ ಬರಲಿ ಅಥವಾ ಬರದೇ ಇರಲಿ ನೀವು ಋಷಿಗಳನ್ನು ಅನುಸರಿಸಿ, ನಿಯಮಗಳನ್ನು ಅನುಸರಿಸಿ, ವೈಯಕ್ತಿಕವಾಗಿ ಸೂಕ್ಷ್ಮಮಟ್ಟದಲ್ಲಿ ನಾನು ಸಂಧಿಸುತ್ತೇನೆ’ ಎಂದು ನಿಮಗೆಲ್ಲ ಹೇಳುವಂತೆ ನನಗೆ ತಿಳಿಸಿದ್ದಾರೆ. ಇದನ್ನು ಹೇಳುವಾಗ ಗುರೂಜಿಯವರು ಪ್ರಾಮಾಣಿಕತೆ, ನಮ್ಮ ಮೇಲಿನ ಕಾಳಜಿ ಮತ್ತು ಪ್ರೀತಿಯನ್ನು ಅಪಾರವಾಗಿ ಹೊಂದಿದ್ದರು. ಅಷ್ಟೇ ಪ್ರಾಮಾಣಿಕತೆಯಿಂದ ನಾವೂ ಪ್ರತಿಯಾಗಿ ಸ್ಪಂದಿಸೋಣ.

11–11–2012

ನಾವು ತಪ್ಪು ಎಂದು ತಿಳಿದುಕೊಂಡಿರುವುದನ್ನು ಬಿಟ್ಟುಕೊಟ್ಟು, ಸರಿ ಎಂದು ತಿಳಿದು–ಕೊಂಡಿರುವುದನ್ನು ಪ್ರಾಮಾಣಿಕವಾಗಿ ಅಭ್ಯಾಸ ಮಾಡಲು ಇದು ಪ್ರಶಸ್ತ ಸಮಯ.

ಗುರೂಜಿಯವರು ಒಬ್ಬರು ಜ್ಞಾನೋದಯ ಹೊಂದಿರುವ ಮಾಸ್ಟರ್. ತಮ್ಮ ಹಿಂದಿನ ಜನ್ಮದ ಬಗ್ಗೆ ಸುಲಭವಾಗಿ ತಿಳಿಯಬಲ್ಲವರು. ಆದರೆ ಪೂರ್ಣ ಶರಣಾಗತಿಯಲ್ಲಿ ಬದುಕುತ್ತಿರುವವರು.

ಗುರೂಜಿಯವರು ಕೂಡಾ ನಮ್ಮೆಲ್ಲರ ಹಾಗೇ ಪ್ರಾರ್ಥಿಸಿದರು. ಆದರೆ ಅದು ಈಡೇರದೇ ಹೋದಾಗ ಅವರು ಆ ಬೆಳವಣಿಗೆಯನ್ನು ದೈವಸಂಕಲ್ಪವೆಂದು ಗೌರವದಿಂದ ಸಂಪೂರ್ಣವಾಗಿ ಒಪ್ಪಿಕೊಂಡರು. ನಮ್ಮ ಜೀವನದಲ್ಲಿ ಈ ರೀತಿ ಅನ್ವಯಿಸುವುದನ್ನು ನಾವು ಕಲಿತುಕೊಂಡರೆ, ಜೀವನ ಅತ್ಯಂತ ಶಾಂತಿಮಯ ಮತ್ತು ಸಂತೋಷದಾಯಕವಾಗಿರುತ್ತದೆ.

ಗುರೂಜಿಯವರು ಹೇಳುತ್ತಾರೆ, ‘ನೀವು ಹೊರಗೆ ಬಂದಾಗ ಆಕಾಶದ ಕಡೆ ನೋಡಿ. ಅದರ ಸೌಂದರ್ಯದಲ್ಲಿ ಏನೋ ವಿಶೇಷತೆ ಇದ್ದು ಅದು ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ. ನಾವು ಅದನ್ನು ಅನುಭವಿಸಿದರೆ ಸಣ್ಣದಾಗಿ ಯೋಚಿಸುವುದಿಲ್ಲ.

ಅನೌಪಚಾರಿಕ ಮಾತುಕತೆಯ ಸಂದರ್ಭದಲ್ಲಿ ಒಮ್ಮೆ ಗುರೂಜಿಯವರು ಹೇಳಿದರು, ‘ನೀವು ಒಬ್ಬ ವ್ಯಕ್ತಿಯನ್ನು ಅವನ ಸಕಾರಾತ್ಮಕತೆ ಮತ್ತು ನಕಾರಾತ್ಮಕತೆಗಳೊಂದಿಗೆ ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು. ನಾವು ನಮ್ಮ ಭಾವನಾತ್ಮಕ ಬೇಡಿಕೆಗಳಿಂದ ಬೇರೆಯವರನ್ನು ಉಸಿರುಗಟ್ಟಿಸುವಂತೆ ಮಾಡಬಾರದು. ನೀವು ಮಾನವ ಸಂಬಂಧಗಳನ್ನು ತಿಳುವಳಿಕೆಯಿಂದ ನಿರ್ವಹಿಸಬಲ್ಲವರಾದರೆ, ಅದು ನಿಮ್ಮ ಆಧ್ಯಾತ್ಮಿಕ ಪ್ರಗತಿಯ ಚಿಹ್ನೆಯಾಗಿದೆ.’ ಗುರೂಜಿಯವರು ನಮ್ಮ ಶಕ್ತಿಗಳು, ಬಲಹೀನತೆಗಳನ್ನು ಗಮನಿಸುತ್ತಾರೆ, ಆದರೆ ನಮ್ಮ ಕುಂದುಕೊರತೆಗಳನ್ನು, ತಪ್ಪುಗಳನ್ನು ನಾವೇ ಗಮನಿಸಿ ಅವುಗಳಿಂದ ಹೊರಬರುವುದಕ್ಕಾಗಿ ಕಾಯುತ್ತಾರೆ.

ಒಂದು ಕೆಲಸವನ್ನು ನಿಯೋಜಿಸಿದ ಮೇಲೆ, ಅದರ ಬಗ್ಗೆ ಅವರು ಏನೂ ಕೇಳುವುದಿಲ್ಲ. ಅವರು ನಮ್ಮನ್ನು ಸಂಪೂರ್ಣವಾಗಿ ಗೌರವಿಸುತ್ತಾರೆ ಮತ್ತು ನಂಬುತ್ತಾರೆ.

ನಾವು ಒಬ್ಬ ವ್ಯಕ್ತಿಯ ನಕಾರತೆಯ ಭಾಗಕ್ಕೆ ಸಂಪರ್ಕಿಸಿದರೆ, ಅವರನ್ನು ತಿದ್ದಲು ಪ್ರಯತ್ನಿಸಿದರೆ ಅಥವಾ ಅದರ ಬಗ್ಗೆ ಗೊಣಗಿದರೆ, ಅದು ಅಸಂತೋಷ, ಅಂತರಗಳನ್ನು ಹೆಚ್ಚು ಮಾಡುತ್ತದೆ. ಬೈಯ್ಯುವುದರಿಂದ ಅಥವಾ ಉಪದೇಶಿಸುವುದರಿಂದ ಮಕ್ಕಳು ಹೆಚ್ಚಾಗಿ ಏನನ್ನೂ ಕಲಿಯುವುದಿಲ್ಲ ಎಂಬುದನ್ನು ನಾನು ಗಮನಿಸಿದ್ದೇನೆ. ಆದರೆ ನಾವು ಹೇಗೆ ನಡೆಯುತ್ತೇವೆ ಎಂಬುದನ್ನು ಗಮನಿಸಿ ಮಕ್ಕಳು ಕಲಿಯುತ್ತಾರೆ.

‘ಒಂದು ಪ್ರಾಮಾಣಿಕ ಅನುಭವದಿಂದಾಗಿ ಒಬ್ಬ ವ್ಯಕ್ತಿಯು ‘ಷರತ್ತಿಲ್ಲದ ಪ್ರೀತಿ’ಯಂತಹ ದೈವಿಕ ಗುಣಗಳನ್ನು ಪ್ರಕಟಪಡಿಸಲು ಸಾಧ್ಯವೇ? ನಾವು ಷರತ್ತಿಲ್ಲದ ಪ್ರೀತಿಯನ್ನು ವ್ಯಕ್ತಪಡಿಸಲು ಸಾಧ್ಯವಾದರೆ ಅದು ಪ್ರಾಮಾಣಿಕ ಆಧ್ಯಾತ್ಮಿಕ ಅನುಭವವಾಗುವತ್ತ ಕರೆದೊಯ್ಯುತ್ತದೆಯೇ?’ ಎಂದು ಒಂದು ಪ್ರಶ್ನೆಯನ್ನು ಕೇಳಲಾಯಿತು. ಅದಕ್ಕೆ ಗುರೂಜಿಯವರು ‘ಎರಡೂ ನಿಜ’ ಎಂದು ಉತ್ತರಿಸಿದರು.

18–11–2012

ಗುರೂಜಿಯವರ ಜೀವನೋತ್ಸಾಹ ಮತ್ತು ಪ್ರೀತಿ ಪ್ರಸಂಶನೀಯ! ಅವರು ಬಹಳ ಬಲಹೀನರಾಗಿದ್ದರೂ ತಪೋನಗರದಲ್ಲಿ ದೀಪಾವಳಿಯ ಆಚರಣೆಯಲ್ಲಿ ಭಾಗವಹಿಸಿದ್ದರು. ಅವರು ಹೇಳಿದರು, ಜೀವನ ಮುಂದೆ ಸಾಗಲೇಬೇಕು.

ಗುರೂಜಿಯವರಿಗೆ ಕ್ಯಾನ್ಸರ್ ರೋಗವಿದೆ ಎಂದು ತಿಳಿದಾಗ ಅವರು ಹೇಳಿದರು, ‘ದೇವರು ಇದನ್ನು ಅನುಮತಿಸಿದ್ದಾರೆ, ನಾನು ಇದನ್ನು ಒಪ್ಪಿಕೊಳ್ಳುತ್ತೇನೆ.’ ದೇವರು ತಮ್ಮನ್ನು ಮತ್ತು ಎಲ್ಲರನ್ನೂ ಪ್ರೀತಿಸುತ್ತಾರೆ ಎಂಬುದನ್ನು ಸಂಪೂರ್ಣವಾಗಿ ಮನಗಂಡು ಅವರು ಬಾಳಿದರು.

ವೈದ್ಯರು ಬೆಳಕಿನ ಒಂದು ವಾಹಿನಿ ಎಂದು ಒಪ್ಪಿಕೊಂಡು, ಅವರಿಗೆ ತಾವು ಸಂಪೂರ್ಣವಾಗಿ ಶರಣಾಗಿದ್ದೇನೆಂದು ಗುರೂಜಿಯವರು ಹೇಳಿದರು. ಬೆಳಕಿಗೆ, ವೈದ್ಯರ ಮುಖಾಂತರ ಕೆಲಸ ಮಾಡಲು

## ಜಯಂತ್ ದೇಶ್‌ಪಾಂಡೆಯವರ ಭಾನುವಾರದ ಉಪನ್ಯಾಸಗಳ ಆಯ್ದಭಾಗಗಳು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

ಇದು ಸಹಾಯವಾಯಿತು. ಜೀವನದ ಪ್ರತಿ ವಿವರದಲ್ಲಿ ಶರಣಾಗತಿ–ಇದು ನಮ್ಮ ಗುರೂಜಿಯವರು.

ಗುರೂಜಿಯವರು ಯಾವುದೇ ಸ್ಥಳಕ್ಕೆ ಭೇಟಿ ನೀಡಿದರೂ, ಅದರ ಸೌಂದರ್ಯವನ್ನು ಗಮನಿಸಿ ಪ್ರಶಂಸಿಸುತ್ತಿದ್ದುದನ್ನು ನಾನು ಗಮನಿಸಿದ್ದೇನೆ. ಪ್ರಪಂಚದಲ್ಲಿ ಒಳ್ಳೆಯದನ್ನು ಗಮನಿಸಬೇಕೆಂದು ಅವರು ಹೇಳುತ್ತಿದ್ದರು.

ಆಸ್ಪತ್ರೆಯಲ್ಲಿ ಕೊನೆಯ ದಿನಗಳಲ್ಲಿ ಅವರು ಅನೇಕ ಸುಂದರ ಅಂಶಗಳನ್ನು ಹೇಳುತ್ತಿದ್ದರು. ಪ್ರತಿಯೊಬ್ಬರೂ ಬದಲಾಗಬಹುದು, ಮಂದಹಾಸ ಬೀರಬಹುದು ಮತ್ತು ಪ್ರೀತಿಸಬಹುದು ಎಂದು ಎಲ್ಲರೂ ತಿಳಿಯಬೇಕೆಂದು ಅವರು ಹೇಳಿದರು. 'ಯಾವ ವ್ಯಕ್ತಿಯ ಬಗ್ಗೆಯೂ ಕೆಟ್ಟದನ್ನು ಯಾವಾಗಲೂ ಯೋಚಿಸಬೇಡಿ. ಇಂಥ ಎಲ್ಲ ಸಂದರ್ಭಗಳಿಂದ ಮೇಲೇರಲು ಇದೊಂದು ಒಳ್ಳೆಯ ಅವಕಾಶ. ಈ ಸ್ಥಳ ಒಂದು ಶಾಲೆಯಿದ್ದಂತೆ. ಇಲ್ಲಿ ನಾವು ಕಲಿಯುತ್ತೇವೆ, ಅರ್ಥಮಾಡಿಕೊಳ್ಳುತ್ತೇವೆ.' ಆಸ್ಪತ್ರೆಯಲ್ಲಿರುವ ಒಳ್ಳೆಯ ಜನರ ಮೂಲಕ ದೇವರ ಕೃಪೆ ತಮಗೆ ಸಹಾಯ ಮಾಡುತ್ತಿದೆ ಎಂದು ಹೇಳಿದರು. ದೇವರು ಯಾವಾಗಲೂ ನಮ್ಮೊಂದಿಗೆ ಇದ್ದಾನೆ. ನಾವು ಕೆಲಸ ಮಾಡುವ ಮೊದಲು ದೇವರು ತನ್ನ ಅಭಿಪ್ರಾಯ ಕೊಡುತ್ತಾನೆ ಮತ್ತು ಅನುಸರಿಸುವಂತೆ ಹೇಳುತ್ತಾನೆ, ಆದರೆ ನಮಗೆ ಇಚ್ಛಾಶಕ್ತಿ ಇರುವುದರಿಂದ ನಾವು ಅದನ್ನು ಅನುಸರಿಸಬಹುದು ಅಥವಾ ಅನುಸರಿಸ–ದಿರಲೂಬಹುದು. ಇದು ಸತ್ಯ.

ಅವರು ಹೇಳಿದರು, 'ದೇವರು ಎಲ್ಲರನ್ನೂ ನೋಡಿಕೊಳ್ಳುತ್ತಾನೆ. ದೇವರನ್ನು ಅರ್ಥ ಮಾಡಿಕೊಳ್ಳಲು ಇದು ಸರಿಯಾದ ಕಾಲ. ಅವನು ಅತ್ಯಂತ ಮುಖ್ಯ ವಿಶ್ವಾತ್ಮಕವಾದ ಸತ್ಯ.' ಜನರು ಅವನನ್ನು ಅರ್ಥಮಾಡಿಕೊಳ್ಳುವುದಿಲ್ಲ, ಆದ್ದರಿಂದ ಅವರು ಕಷ್ಟಪಡುತ್ತಾರೆ. ಅವನನ್ನು ನಾವು ಒಪ್ಪಿಕೊಳ್ಳಬೇಕು. ಅವನು ನಮ್ಮ ಸೃಷ್ಟಿಕರ್ತ. ಈ ಪ್ರಪಂಚ ಸುಂದರವಾಗಿದೆ. ಋಷಿಗಳೊಡನೆ ಇರುವ ನಾವು ಅವನನ್ನು ಅರ್ಥಮಾಡಿಕೊಳ್ಳಬೇಕು. ಜನರು ಆಧ್ಯಾತ್ಮಿಕ ಬೆಳವಣಿಗೆಯ ಬೇರೆಬೇರೆ ಹಂತಗಳಲ್ಲಿದ್ದಾರೆ, ಅವರಿಗೆ ಬೆಳೆಯಲು ಕಾಲಾವಕಾಶ ಕೊಡಬೇಕು. ಒಂದು ಗುರುವಿಗೆ ನೀಡುವ ಅತ್ಯುತ್ತಮ ಕಾಣಿಕೆ ಎಂದರೆ, ಅವನನ್ನು ಅರ್ಥ ಮಾಡಿಕೊಂಡು ಅವನ ಬೋಧನೆಗಳನ್ನು ಕಾರ್ಯರೂಪಕ್ಕೆ ತರುವುದು ಎಂದು ಗುರೂಜಿಯವರು ಹೇಳಿದರು.

ಗುರೂಜಿಯವರು ಮುಂದುವರಿಸಿದರು, 'ನಾವೆಲ್ಲಾ ಒಬ್ಬ ಮಾನವ ಗುರುವಿನ ಮೂಲಕ ಋಷಿಗಳೊಂದಿಗೆ, ಹಾಗೆಯೇ ದೇವರೊಂದಿಗೆ ಸಂಪರ್ಕಿತರಾಗಿದ್ದೇವೆ ಎಂದು ನನ್ನ ಮೂಲಕ ದೇವರು ನಿಮಗೆ ತಿಳಿಸುತ್ತಿದ್ದಾನೆ. ದೇವರು ಎಲ್ಲರೊಂದಿಗೆ, ಎಲ್ಲಾ ಕಾಲದಲ್ಲಿ ಸಂಪರ್ಕಿತನಾಗಿದ್ದಾನೆ. ಎಂತಹ ಮಹಾನ್ ಸತ್ಯ! ಪ್ರಪಂಚದಲ್ಲಿ ಪ್ರತಿಯೊಂದಕ್ಕೂ ಮೂಲ ಪ್ರೀತಿ. ಇಡೀ ಸೃಷ್ಟಿ ಪ್ರೀತಿಯಿಂದ ಹುಟ್ಟಿದೆ. ಪ್ರೀತಿ ಎಲ್ಲದರ ಜವಾಬ್ದಾರಿ ತೆಗೆದುಕೊಳ್ಳುತ್ತದೆ. ನಾನು ತಿಳಿದಿರುವಂತೆ ಅತ್ಯುನ್ನತ ನೆಲೆಯಲ್ಲಿ ಪ್ರೀತಿ ಮಾತ್ರ ಇದೆ.' ಅವರು ಹೇಳಿದರು, 'ಪ್ರತಿಯೊಬ್ಬರೂ ಆ ಹಂತಕ್ಕೇರಿ ಈ ಎಲ್ಲಾ ವಿಷಯಗಳನ್ನು ಅರಿಯಬೇಕೆಂದು ನಾನು ಬಯಸುತ್ತೇನೆ.' ಕೊನೆಯಲ್ಲಿ ಅವರು, 'ದಯವಿಟ್ಟು ಬೆಳಕಿಗೆ ಬಾಗಿಲಿಗಳು ಪುಸ್ತಕವನ್ನು ಮತ್ತೆ ಓದಿ. ನೀವು ಎಷ್ಟೋ ವಿಷಯಗಳನ್ನು ತಿಳಿಯುವಿರಿ, ಅರ್ಥಮಾಡಿಕೊಳ್ಳುವಿರಿ' ಎಂದು ಹೇಳಿದರು.

25–11–2012

ಗುರೂಜಿಯವರು ಭೌತಿಕ ಶರೀರದಲ್ಲಿ ನಮ್ಮೊಂದಿಗೆ ಇಲ್ಲವೆಂದು ನಂಬಲು ಬಹಳ ಕಷ್ಟವಾಗುತ್ತಿದೆ. ಅವರು ಭೌತಿಕ ಉಪಸ್ಥಿತಿ ಇಲ್ಲಿ ಅಷ್ಟೊಂದು ಮಹತ್ವದ್ದಾಗಿತ್ತು. ಪ್ರತಿಯೊಬ್ಬರೂ ವೈಯಕ್ತಿಕವಾಗಿ ಅವರೊಡನೆ ವಿಚಾರವಿನಿಮಯ ಮಾಡಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಅವರು ಇಲ್ಲಿದ್ದಾರೆ ಎಂಬ ಅರಿವೊಂದೇ ದೊಡ್ಡ ವ್ಯತ್ಯಾಸವನ್ನು ಉಂಟುಮಾಡುತ್ತಿತ್ತು. ಅವರ ಸಂದೇಶ ಬಹಳ ಸರಳ, 'ಋಷಿಗಳನ್ನು ಅನುಸರಿಸಿ.' ನಾವು ಎಷ್ಟು ಸಾಧ್ಯವೋ ಅಷ್ಟನ್ನು ಅಳವಡಿಸಿಕೊಳ್ಳೋಣ, ಅವರು ಕಲಿಸಿದಂತೆ ಬದುಕಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸೋಣ.

ಗುರೂಜಿಯವರು ಹೇಳಿದರು, 'ಹೀಲಿಂಗ್ ಚೈತನ್ಯಗಳು ಸಹಾಯ ಮಾಡುತ್ತಿವೆ. ಓ ದೇವರೇ! ನಾನು ಇವುಗಳನ್ನು ತುಂಬಾ ಪಡೆದೆ. ಒಂದು ರೀತಿಯ ಉಪಶಮನ ದೊರೆತಿದೆ. ಇಲ್ಲವಾದರೆ ನಿರ್ವಹಿಸಲು ಬಹಳ ಕಷ್ಟವಾಗುತಿತ್ತು.' ಹೀಲಿಂಗ್ ಚೈತನ್ಯಗಳಿಂದ ಕರ್ಮಗಳನ್ನು ತೆಗೆಯಲು ಸಾಧ್ಯವಿಲ್ಲ, ಅವುಗಳನ್ನು ಅನುಭವಿಸಲೇಬೇಕು ಎಂದು ಅವರು ಹೇಳಿದರು. ಗುರೂಜಿಯವರು ಜನರ ಕಷ್ಟಗಳು, ಸಮಸ್ಯೆಗಳು ನೋವುಗಳನ್ನು ಉಪಶಮನಗೊಳಿಸಿ, ಅವರ ಕರ್ಮಗಳ ಸ್ವಲ್ಪ ಭಾಗವನ್ನು ಸ್ವತಃ ತಾವೇ ತೆಗೆದುಕೊಂಡು ಅವರಿಗೆ ಅಗತ್ಯವಾಗಿ ಬೇಕಾಗಿದ್ದ ಪರಿಹಾರವನ್ನು ನೀಡಿದ್ದಾರೆ. ಅವರು ತಮ್ಮ ಚಿಕ್ಕ ವಯಸ್ಸಿನಿಂದಲೇ ಬೇರೆಯವರ ಕರ್ಮಗಳನ್ನು ತಾವು ಸ್ವತಃ ತೆಗೆದುಕೊಳ್ಳುತ್ತಿದ್ದರು.

ಗುರೂಜಿಯವರು ಆಸ್ಪತ್ರೆಯಲ್ಲಿ ಬೆಳಕನ್ನು ತುಂಬಿದರು. ಅವರಿಗೆ ಸಹಾಯ ಮಾಡುತ್ತಿದ್ದ ಜನರಿಗಾಗಿ ಅವರ ಹೃದಯ ತುಂಬಿಬಂದಿತು. ಅಲ್ಲಿದ್ದ ಎಲ್ಲ ರೋಗಿಗಳಿಗೂ, ಪ್ರತಿಯೊಬ್ಬರಿಗೂ ಅವರು ಸಹಾಯ ಮಾಡಬೇಕೆಂದು ಬಯಸಿದರು. ಗುರೂಜಿಯವರು ಅವರೆಲ್ಲರಿಗೆ ಬೆಳಕನ್ನು ಕಳುಹಿಸಿದರು.

ಒಮ್ಮೆ ಗುರೂಜಿಯವರು ವಿವರಿಸಿದರು, 'ಭರವಸೆಯೇ ಇಲ್ಲದ ಸ್ಥಳ ಅಥವಾ ಸನ್ನಿವೇಶವೊಂದು ಇದ್ದರೆ, ಅಲ್ಲಿಗೆ ಹೋಗಿ ಭರವಸೆಯನ್ನು ಹುಟ್ಟಿಸುತ್ತೇನೆ.' ಬಹುಶಃ ಅಂತಹ ಸನ್ನಿವೇಶ ಎಲ್ಲಿಯೋ ಇತ್ತೆಂದು ತೋರುತ್ತದೆ, ಅವರ ಅಗತ್ಯ ಅಲ್ಲಿತ್ತು. ಅವರಿಂದ ಕೆಳತರಲ್ಪಟ್ಟ ಅಗಾಧ ಜ್ಞಾನ ಮತ್ತು ಚೈತನ್ಯಗಳು ಅನೇಕ ಜನ್ಮಾಂತರಗಳವರೆಗೆ ಸಹಾಯ ಮಾಡುತ್ತವೆ. ಅವರು ಯಾವಾಗಲೂ ಹೇಳುತ್ತಿದ್ದರು, 'ಅವಸರ ಬೇಡ. ಚೆನ್ನಾಗಿ ಮತ್ತು ನಿಧಾನವಾಗಿ ಅರ್ಥ ಮಾಡಿಕೊಳ್ಳೋಣ.'

ಗುರೂಜಿಯವರು ತಮ್ಮ ಕೊನೆಯ ಕೆಲವು ದಿನಗಳಲ್ಲಿ ತುಂಬಾ ಸಂತೋಷವಾಗಿ ಮತ್ತು ಶಾಂತಿಯಿಂದ ಇದ್ದರು. ಗುರೂಜಿಯವರು ನಿಮ್ಮನ್ನು ತುಂಬಾ ಪ್ರೀತಿಸುತ್ತಾರೆ ಎಂದು ಎಲ್ಲಾ ವಿದ್ಯಾರ್ಥಿಗಳಿಗೆ ತಿಳಿಸಿ ಎಂದು ಅವರು ನನಗೆ ಹೇಳಿದರು. ಈ ಮಾತುಗಳು ಅವರ ಹೃದಯದಿಂದ ಬಂದಿದ್ದವು. ಅವರು ಬಹಳ ಶಕ್ತಿಗುಂದಿದ್ದರು, ಆದರೂ ಅವರಲ್ಲಿನ ಮಾನವ ಭಾಗ ಜೀವಂತವಾಗಿತ್ತು ಮತ್ತು ಲವಲವಿಕೆಯಿಂದ ಕೂಡಿತ್ತು. ಅವರು ಎಲ್ಲರಿಗೂ ಒಂದೇ ರೀತಿಯ ನಗುವನ್ನು ಬೀರುತ್ತಿದ್ದರು; ಅದು ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿತ್ತು. ಅದನ್ನು ಬೇರ್ಪಡಿಸಲಾಗುತ್ತಿರಲಿಲ್ಲ.

ಅವರು ಭೇಟಿ ಮಾಡಿದ ಎಲ್ಲರೊಂದಿಗೆ ಅತ್ಯಂತ ಸೌಹಾರ್ದ, ಸುಂದರ ಸಂಬಂಧಗಳನ್ನು ಹೊಂದಿದ್ದರು. ಅದು ಸ್ವಾಭಾವಿಕವಾಗಿತ್ತು. ಅವರು ಪ್ರೀತಿಯ ಪ್ರತಿರೂಪವಾಗಿದ್ದರು.

ಅವರು ಡಿಸೆಂಬರ್ 2012ರ ಬಗ್ಗೆ ಬಹಳ ದುಃಖದಿಂದ ಕೂಡಿದ್ದರು. ಅವರು, 'ಬಹಳ ಜನರು ಸಿದ್ಧವಾಗಿಲ್ಲ ಇದು ಶೋಚನೀಯ' ಎಂದಿದ್ದರು. ದೇವರು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಎಲ್ಲಾ ಸಮಯದಲ್ಲೂ ಮಾತನಾಡುತ್ತಿದ್ದಾನೆ. ಪ್ರತಿಯೊಬ್ಬರೂ ಹೊಸಯುಗಕ್ಕೆ ಹೋಗಬೇಕೆಂದು ಬಯಸುತ್ತಾನೆ. ಆಯ್ಕೆ ಮಾಡಿಕೊಳ್ಳುವುದು ನಮಗೆ ಬಿಟ್ಟಿದ್ದು. ಪ್ರತಿಯೊಬ್ಬರೂ ಸೂಕ್ಷ್ಮಮಟ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಎಂಬುದು ನಮಗೆಲ್ಲ ತಿಳಿದಿದೆ. ಅವರವರ ಜಾಗೃತಿಯ ಮಟ್ಟ ಮತ್ತು ಆಧ್ಯಾತ್ಮಿಕ ಮಟ್ಟವನ್ನು ಆಧರಿಸಿ ಜನರಿಗೆ ಮಾರ್ಗದರ್ಶನ ಕೊಡಲಾಗುತ್ತದೆ.

ಗುರೂಜಿಯವರ ನಿಧನದ ನಂತರ ನಮ್ಮ ವಾಲಂಟಿಯರ್‌ಗಳು ಕೆಲಸ ಮಾಡುತ್ತಿದ್ದ ರೀತಿಯನ್ನು ನೋಡಿ, ಅವರಿಗೆ ಸಂತೋಷ ಮತ್ತು ಹೆಮ್ಮೆಯಾಗಿರಲೇಬೇಕು; ಪ್ರತಿಯೊಂದು ಸುಸಜ್ಜಿತವಾಗಿತ್ತು, ಎಲ್ಲರೂ ಮೌನವಾಗಿ, ಶಿಸ್ತುಬದ್ಧ ಮತ್ತು ಗೌರವಯುತವಾಗಿ ಕೆಲಸ ಮಾಡುತ್ತಿದ್ದರು. ಈಗ ಅದು ನಮಗೆ ಸ್ವಾಭಾವಿಕವಾಗಿದೆ. ಅವರು ಹಾಗೆ ತರಬೇತಿ ಕೊಟ್ಟು ತಯಾರಿ ಮಾಡಿದ್ದಾರೆ.

ಗುರೂಜಿಯವರು ಯಾವಾಗಲೂ ಪ್ರತಿಯೊಂದು ವಿವರವನ್ನು ಅತ್ಯಂತ ವ್ಯವಸ್ಥಿತವಾಗಿ ಯೋಜಿಸುತ್ತಿದ್ದರು. ಮಾರ್ಗದರ್ಶಿಸುವುದರಲ್ಲಿ ಕೂಡಾ ಅವರಲ್ಲಿ ಯಾವಾಗಲೂ ಸ್ಪಷ್ಟತೆಯಿತ್ತು. ಅವರು, ದಹನ ಸಂಸ್ಕಾರ ಮಾಡಬೇಕಾದ ಸ್ಥಳ, ಚಿತಾಬಸ್ಮ ಇಡಬೇಕಾದ ಸ್ಥಳ ಇತ್ಯಾದಿಗಳ ಬಗ್ಗೆ ನೀಡಿದ್ದ ಸೂಚನೆಗಳು ಬಹಳ ಸಹಾಯ ಮಾಡಿದವು. ಇದು ಹೃದಯಸ್ಪರ್ಶಿಯಾಗಿತ್ತು. ಅವರ ಚಿತಾಭಸ್ಮ, ಅವರ ಚೈತನ್ಯಗಳು ಎಲ್ಲರಿಗೂ ಮತ್ತು ಇಡೀ ಪ್ರಪಂಚಕ್ಕೆ ಮೀಸಲಾಗಿದೆ. ಅವರು ದೇಹ ಬಿಟ್ಟಾಗ ಬಹುಶಃ ವಿಶೇಷ ಚೈತನ್ಯಗಳನ್ನು ಅವರು ನಮಗೆಲ್ಲಾ ಕಳುಹಿಸಿರಬೇಕು. ಅನೇಕರಿಗೆ ಅದರ ಅನುಭವವಾಯಿತು.

ಅನೇಕರಿಗೆ, ಆಸ್ಪತ್ರೆಯಲ್ಲಿ ಗುರೂಜಿಯವರನ್ನು ಭೇಟಿಮಾಡುವುದಕ್ಕೆ ವ್ಯವಸ್ಥೆ ಮಾಡಲು ನನಗೆ ಆಗಲಿಲ್ಲ. ಆದರೆ ನೀವೆಲ್ಲ ಅರ್ಥ ಮಾಡಿಕೊಂಡು ಸಹಕರಿಸಿದಿರಿ. ಅದು ನಿಜವಾಗಿ ಹೃದಯಸ್ಪರ್ಶಿ ಮತ್ತು ತೃಪ್ತಿಕರವಾಗಿತ್ತು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರ ಸ್ವ–ಸ್ವರೂಪ

**ಅಭಿಲಾಷಿತಾ ವಿನಯ್; ಅನು: ಸುಧಾಕರ್**

ಯಾವ ವ್ಯಕ್ತಿಯನ್ನು ಬಿಟ್ಟು ನನ್ನ ಜೀವನವನ್ನು ಊಹಿಸಲು ಸಾಧ್ಯವಿಲ್ಲವೋ, ಆದೇ ವ್ಯಕ್ತಿಯ ಬಗ್ಗೆ ಬರೆಯಲು ಕುಳಿತಾಗ ನಾನು ಅತ್ಯಂತ ಭಾವುಕಳಾದೆ ಮತ್ತು ನಾನು ಹೇಳಬೇಕೆಂದುಕೊಂಡದ್ದನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲು ಪದಗಳಿಂದ ಸಾಧ್ಯವಾಗುತ್ತಿಲ್ಲ. ಅವರು ಹೇಳಿದ ವಿಷಯಗಳು, ಕಲಿಸಿದ ಪಾಠಗಳು ಅವರ ಕಾಲಕ್ಕಿಂತ ಬಹಳ ಮುಂದುವರೆದವುಗಳಾಗಿದ್ದರೂ, ನಾವು ಜೀವಿಸುತ್ತಿರುವ ಕಾಲಕ್ಕೂ ಅವು ಅನ್ವಯಿಸುತ್ತವೆ ಮತ್ತು ಯಾವಾಗಲೂ ಆಚರಣೆಗೆ ತರಲು ಸಾಧ್ಯವಾದವುಗಳಾಗಿವೆ. ಕಾರ್ಯರೂಪಕ್ಕೆ ತರುವಂಥ ವಿಷಯಗಳು, ವಿವೇಕಯುತ ಜೀವನ ಮತ್ತು ಹದವರಿತ ಭಾವನೆಗಳಲ್ಲಿ ಅವರು ಯಾವಾಗಲೂ ನಂಬಿಕೆ ಇಟ್ಟಿದ್ದರು. ನನಗೆ, ಅವರು ಯಾವಾಗಲೂ ಜೀವನದ ಪೂರ್ಣತೆಯ ಸಾಕಾರರೂಪವೇ ಆಗಿದ್ದಾರೆ! ಅವರು ಜೀವನವನ್ನು ಒಪ್ಪಿಕೊಂಡರಷ್ಟೇ ಅಲ್ಲದೆ ಅದರ ಒಂದೊಂದು ಕ್ಷಣವನ್ನೂ ಸಂಭ್ರಮಿಸುತ್ತಿದ್ದ ವ್ಯಕ್ತಿಯಾಗಿದ್ದರು. ಯಾವುದೇ ಹಿನ್ನೆಲೆ ಅಥವಾ ಬೆಳೆದುಬಂದ ರೀತಿಯಿದ್ದರೂ, ನಿರಂತರ ಪ್ರಯತ್ನ ಮತ್ತು ಶುದ್ಧವಾದ ಉದ್ದೇಶದಿಂದ ಒಬ್ಬ ವ್ಯಕ್ತಿ ಬೆಳೆದು ಮನುಷ್ಯತ್ವದ ಹಿರಿಮೆಯನ್ನು ಮೆರೆಯುವಂಥ ಅತ್ಯುನ್ನತ ಮಟ್ಟಕ್ಕೇರಬಹುದು ಎನ್ನುವುದಕ್ಕೆ ಅವರು ಜೀವಂತ ಸಾಕ್ಷಿಯಾಗಿದ್ದರು. ಋಷಿಗಳಿಗೆ, ಅವರ ಕೆಲಸಕ್ಕೆ ಮತ್ತು ತಮ್ಮ ಗುರುವಿನ ಬಗೆಗೆ ಅಷ್ಟೊಂದು ಸಮರ್ಪಣೆ, ಪ್ರೀತಿ ಮತ್ತು ಗೌರವ ಇಟ್ಟಿರುವ ಇನ್ನೊಬ್ಬ ವ್ಯಕ್ತಿಯನ್ನು ನನ್ನ ಜೀವನದಲ್ಲಿ ಕಂಡಿಲ್ಲ. ನಾವು ಮಕ್ಕಳಾಗಿದ್ದಾಗ ನಮಗೆ ಅಮರರವರ ಕಥೆಗಳನ್ನು ಹೇಳುತ್ತಿದ್ದರು. ನಾವು ಅಮರರವರನ್ನು ನೋಡಲಾಗದಿದ್ದರೂ ಅವರಂತೆಯೇ ಜೀವಿಸುತ್ತಿದ್ದ ಗುರೂಜಿಯವರನ್ನು ನೋಡುತ್ತಾ ಬೆಳೆಯುವ ಸೌಭಾಗ್ಯ ನಮ್ಮದಾಗಿತ್ತು. ಅವರ ಗುರುವಿನ ಪ್ರತಿಯೊಂದು ನಿರೀಕ್ಷೆಯನ್ನೂ ಮೀರಿ ಬೆಳೆದವರೆಂದರೆ ಗುರೂಜಿಯವರು ಮಾತ್ರ.

ತಮ್ಮ ಬಳಿಗೆ ಬಂದ ವ್ಯಕ್ತಿ ಯಾರೇ ಆಗಿದ್ದರೂ, ಗುರೂಜಿಯವರು ಅವರಿಗೆ ರಕ್ಷಣೆ ಕೊಟ್ಟು ನೋಡಿಕೊಳ್ಳುತ್ತಿದ್ದರು. ನಮ್ಮ ಜೀವನದ ಯಾವುದಾದರೊಂದು ಸಂದರ್ಭದಲ್ಲಿ, ಒಂದಲ್ಲ ಒಂದು ರೀತಿಯಲ್ಲಿ ನಮ್ಮೆಲ್ಲರನ್ನೂ ಗುರೂಜಿಯವರು ರಕ್ಷಿಸಿದ್ದಾರೆ, ಕಾಪಾಡಿದ್ದಾರೆ. ಇನ್ನು ಮುಂದೆಯೂ ನಿರಂತರವಾಗಿ ಅವರಿಂದ ರಕ್ಷಣೆ ಮತ್ತು ಮಾರ್ಗದರ್ಶನವನ್ನು ನಾವು ಪಡೆಯುತ್ತೇವೆ ಎಂಬುದು ನನಗೆ ಖಚಿತವಾಗಿ ತಿಳಿದಿದೆ. ತಮ್ಮ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಇಡೀ ಮನುಕುಲಕ್ಕೇ ಷರತ್ತಿಲ್ಲದ ಪ್ರೀತಿಯನ್ನು ಹೊಂದಿರುವ ಗುರೂಜಿಯವರಂಥ ಮಹಾನ್ ಮಾಸ್ಟರ್‌ಗಳಿಗೆ ಮಾತ್ರ ಈ ರೀತಿಯ ಕೆಲಸ ಮಾಡಲು ಸಾಧ್ಯ. ಮಿಲಿಯನ್ ವರ್ಷಗಳಿಗೆ ಒಮ್ಮೆ ಅವರಂಥ ಒಬ್ಬ ವ್ಯಕ್ತಿ ಹುಟ್ಟಿಬರುತ್ತಾರೆ! ಅವರು ತಮ್ಮ ಒಂದು ಜನ್ಮದಲ್ಲಿ ಮಹಾನ್ ಫ್ಯಾರೋ ಆಗಿದ್ದರು ಎಂದು ತಿಳಿದು ಬಂದಿದೆ. ನನಗೆ ಅವರು ಈ ಜನ್ಮದಲ್ಲೂ ಒಬ್ಬ ಮಹಾನ್ ಫ್ಯಾರೋ ಆಗಿದ್ದರು. ಅವರು ಜೀವಿಸುತ್ತಿದ್ದ ರೀತಿಯಲ್ಲಿ, ಅವರ ನಡೆ–ನುಡಿ ಮತ್ತು ಚಿಂತನೆಯಲ್ಲಿ ಅದು ಪ್ರತಿಫಲಿಸುತ್ತಿತ್ತು. ಅವರು ಯಾವಾಗಲೂ ಮಹಾನ್ ಫ್ಯಾರೋ ಆಗಿಯೇ ಇರುತ್ತಾರೆ!! ■

## ನನ್ನ ಜೀವನದಲ್ಲಿ ಗುರೂಜಿಯವರ ಪಾತ್ರ

**ಪದ್ಮಜಾ ಬಾಲಾಜಿ; ಅನು: ಸ್ವರ್ಣಲತಾ**

ಎಂದೆಂದಿಗೂ ಚಿರಂತನವಾಗಿ ಇರುವ ಗುರೂಜಿಯವರನ್ನು ನಾನು ಮೊದಲಬಾರಿ ಭೇಟಿಯಾದಾಗ ಅವರ ಮುಂದೆ ನಾನು ಮಗುವಿನಂತಾಗಿ ಅತ್ತೆನು. ಅವರು ತಮ್ಮ ನಮ್ರತೆ ಮತ್ತು ನಗುವಿನೊಂದಿಗೆ ನಮಗೂ ಮತ್ತು ಪರಿಶುದ್ಧತೆಗೂ ಇರುವ ಅನೇಕ ಬೆಳಕಿನ ವರ್ಷಗಳ ಅಂತರವನ್ನು ತುಂಬಿದ ರೀತಿಗಾಗಿ ಮುಂದಿನ ಒಂದು ವಾರದವರೆಗೆ ನಾನು ಅತ್ತಿದ್ದೆ. ಅನೇಕ ವರ್ಷಗಳವರೆಗೆ ಮೈಲಿಗಳಷ್ಟು ದೂರದಲ್ಲಿ ಕುಳಿತು ನಾನು ದೇವತೆಗಳು, ಪಾರಿವಾಳಗಳು, ವಾಹನಗಳು, ಕನಸುಗಳು, ಪುಸ್ತಕಗಳು, ಕವಿತೆಗಳು, ನಷ್ಟಗಳು, ತೀರ್ಮಾನಗಳು ಮತ್ತು ಇಂತಹುದೆಲ್ಲದರ ಬಗ್ಗೆ ಬರೆದಾಗ, ಅವರು ದಣಿವನ್ನರಿಯದೆ ತಮ್ಮ ವಿವೇಕ, ಪ್ರೀತಿ, ಹಾಸ್ಯ ಮತ್ತು ಚೈತನ್ಯಗಳಿಂದ ಉತ್ತರಿಸುತ್ತಿದ್ದರು. ಅವರ ಅತಿ–ಲಾಲನೆಯ ಉತ್ತರಗಳನ್ನು ಓದಿದ ನಂತರ ಗಂಟೆಗಟ್ಟಲೆ ಮೌನವಾಗಿ ಕಣ್ಣೀರು ಸುರಿಸುತ್ತಾ ಕುಳಿತಿರುತ್ತಿದ್ದೆ ಎಂದರೆ ಅದು ಉತ್ಪ್ರೇಕ್ಷೆಯಲ್ಲ. ನಾನು ಅವರನ್ನು ಭೇಟಿಮಾಡಿದಾಗಲೆಲ್ಲಾ ಅವರ ಅದ್ಭುತ ಶಕ್ತಿ ಮತ್ತು ಪ್ರೀತಿ ನನ್ನನ್ನು ಅತಿಯಾಗಿ ಭಾವಪರವಶಗೊಳಿಸುತ್ತಿತ್ತು. ಏಕಕಾಲದಲ್ಲಿ ಪುರಾತನ ಮತ್ತು ನವಜಾತರಾಗಿ ಇರುವುದು ಹೇಗೆ ಅನ್ನಿಸುತ್ತದೆ ಎಂದು ತೋರಿಸಿಕೊಟ್ಟವರೇ ಅವರು. ಪ್ರತಿಯೊಬ್ಬರೂ ವಿಶೇಷ ವ್ಯಕ್ತಿ ಎಂಬಂತೆ ನಡೆದುಕೊಳ್ಳಲು ಗುರೂಜಿಯವರೊಂದಿಗಿನ ಗಾಢವಾದ ಒಂದೇ ಭೇಟಿ ಸಾಕು. ಅದು ಹೇಗೋ ಅವರ ಅಧ್ಯಾತ್ಮದ ನೆರಳಿನಡಿ ಬಂದಿರುವುದು ನನ್ನ ಅದೃಷ್ಟವೇ ಸರಿ.

ಸೆಪ್ಟೆಂಬರ್ 2010ರಲ್ಲಿ ನಾನು ಗುರೂಜಿಯವರನ್ನು ಎರಡನೆಯಸಲ ಭೇಟಿ ಮಾಡಿದೆ. ಅಂದು ಅವರೊಂದಿಗೆ ಮಾತನಾಡುತ್ತಾ ಕೈಗಡಿಯಾರದತ್ತ ನೋಡಿದಾಗ ಶಂಬಲ ತರಗತಿಗೆ ತೆರಳಲು ಕೇವಲ ಐದು ನಿಮಿಷಗಳಿದ್ದವು. ಅವರು ಆತಂಕ ಬೇಡ ಎಂದು ಸಂತೈಸಿದರು. ನಾನು ಆತಂಕಗೊಂಡಂತೆ, ತರಗತಿ ಆರಂಭವಾಗಲು ತಡವಾಗಿ ಗುರೂಜಿಯವರು ಪ್ರಾರಂಭಿಕ ಅಭ್ಯಾಸಗಳನ್ನು ಕೈಬಿಡಬೇಕಾಯಿತು. ಅಂದು ತರಗತಿಯಲ್ಲಿ ಅವರು ಹೇಳಿದ್ದು ಕೇಳಿ ನನಗೆ ಆಘಾತವಾಯಿತು....... ಭಗವಾನ್ ಮೈತ್ರೇಯ ಅಂದಿನ ತರಗತಿಗೆ ಬರಬೇಕಿತ್ತು ಆದರೆ ಕೊನೆಯ ಘಳಿಗೆಯಲ್ಲಿ ಭಗವಾನ್ ಕಲ್ಕಿ ಬರಲು ತೀರ್ಮಾನಿಸಿದರು. ಸಮಯಕ್ಕೆ ಸರಿಯಾಗಿ ಬಂದ ಅವರನ್ನು ಕಾಯುವಂತೆ ಮಾಡಿದುದಕ್ಕೆ ಭಗವಾನ್ ಕಲ್ಕಿಯವರಲ್ಲಿ ಗುರೂಜಿಯವರು ಕ್ಷಮಾಪಣೆ ಕೇಳಿದರು. ನಂತರ ನಾನು ಕಂಬನಿ ತುಂಬಿದ ಕ್ಷಮಾಪಣಾ ಪತ್ರವನ್ನು ಬರೆದಾಗ ಗುರೂಜಿಯವರು, ಭಗವಾನ್ ಕಲ್ಕಿ ಏನೂ ಆಕ್ಷೇಪಿಸಲಿಲ್ಲ, ಚಿಂತಿಸಬೇಡ ಎಂದು ಉತ್ತರಿಸಿದ್ದರು!

ನಾನೀಗ ಅವರನ್ನು ತುಂಬಾ ಮಿಸ್ ಮಾಡುತ್ತಿದ್ದೇನೆ...... ಆದರೂ ನಾನು ಮಿಸ್ ಮಾಡುತ್ತೇನೆ ಎಂದೂ ನನಗನಿಸುವುದಿಲ್ಲ ಏಕೆಂದರೆ ಅವರ ಪ್ರಜ್ವಲಿಸುತ್ತಿದ್ದ ಚಿತಾಗ್ನಿಯನ್ನು ವೀಕ್ಷಿಸುತ್ತಿದ್ದಾಗ, 'ನಾನು ಕೆಲಸಕ್ಕಾಗಿ ಬದುಕುತ್ತೇನೆ. ನಾನು ಋಷಿಗಳಿಗಾಗಿ ಕೆಲಸ ಮಾಡುತ್ತೇನೆ. ನಾನು ಪ್ರಪಂಚಕ್ಕಾಗಿ ಕನಸು ಕಾಣುತ್ತೇನೆ' ಎನ್ನುವ ಅವರ ಧ್ಯೇಯ ಮತ್ತು ಬೆಳಕನ್ನು ಅನುರಣಿಸು ಎಂದು ಅದು ನನ್ನ ಹೃದಯದೊಂದಿಗೆ ಪಿಸುಗುಟ್ಟಿತ್ತು. ಸರಿ, 'ಎಲ್ಲ ಋಷಿಗಳೂ ಅಮರರು!' ಎಂಬ ಅವರ ಮಾತುಗಳನ್ನು ನೆನೆಯುತ್ತಾ ನಾನೂ ಕೂಡ ಒಂದು ಗುಟ್ಟಾದ ಬಯಕೆಯನ್ನು ಪೋಷಿಸುತ್ತಿದ್ದೇನೆ. ■

## ಮರು ಪಯಣ

**ಬ್ರಜಬಂಧು ಮಿಶ್ರ; ಅನು: ಸುಧಾಕರ್**

'ಋಷಿಗಳು ಯಾವಾಗ ಕರೆದರೂ ನಾನು ಹೋಗಲು ಸಿದ್ಧನಿದ್ದೇನೆ' ಎಂದು ಗುರೂಜಿಯವರು ಹೇಳುತ್ತಿದ್ದರು. ಋಷಿಗಳು ಭಾನುವಾರ ಕರೆದರು ಗುರೂಜಿಯವರು ಶುಕ್ರವಾರ ನಮ್ಮನ್ನಗಲಿದರು. ನಾವು ಅತಿಯಾಗಿ ಪ್ರೀತಿಸಿದ ವ್ಯಕ್ತಿ ಅವರಾಗಿದ್ದರು. ಅವರು ಈ ಭೂಮಿಯ ಮೇಲಿನ ಅತ್ಯುತ್ತಮ ವ್ಯಕ್ತಿಯಾಗಿದ್ದರು. ಅವರು ಪ್ರೀತಿಯ ಸಾಕಾರವಾಗಿದ್ದರು. ಅವರು ಎಲ್ಲರನ್ನೂ ಸಮಾನವಾಗಿ ಪ್ರೀತಿಸುತ್ತಿದ್ದರು ಮತ್ತು ಗೌರವಿಸುತ್ತಿದ್ದರು.

'ಪ್ರತಿಯೊಂದನ್ನೂ ದೇವರ ಕೊಡುಗೆ ಎಂದು ಸ್ವೀಕರಿಸಿ' ಎಂದು ಅವರು ನಮಗೆ ಹೇಳುತ್ತಿದ್ದರು. ಅವರ ಅನಾರೋಗ್ಯವನ್ನು ದೇವರ ಕೊಡುಗೆ ಎಂದು ಒಪ್ಪಿಕೊಳ್ಳುವ ಮುಖಾಂತರ ಅದನ್ನು ನಮಗೆ ನಿದರ್ಶಿಸಿದರು. 'ಪ್ರೀತಿಸಿ, ಒಪ್ಪಿಕೊಳ್ಳಿ, ಜೀವನವನ್ನು ಸಂಭ್ರಮಿಸಿ, ದೂರಬೇಡಿ, ಗೊಣಗಬೇಡಿ' ಎಂದು ನಮಗೆ ಹೇಳಿಕೊಟ್ಟರು. ಅವರ ಕೊನೆ ಉಸಿರಿರುವವರೆಗೂ ಜೀವನವನ್ನು ಅವರು ಸಂಭ್ರಮಿಸಿದರು.

ಖಂಡಿತವಾಗಿಯೂ ಅವರ ಕೃಪೆಯಿಂದಾಗಿಯೇ ನಾವು ಅವರ ಸಂಪರ್ಕಕ್ಕೆ ಬಂದಿದ್ದು. ಅವರ ಎಲ್ಲ ವಿದ್ಯಾರ್ಥಿಗಳೂ ನಿಜವಾಗಿಯೂ ಅದೃಷ್ಟವಂತರು. ನಿಜವಾಗಿಯೂ ನಾವು ಮಹಾತ್ಮರೊಬ್ಬರೊಂದಿಗೆ ಜೀವಿಸಿದೆವು ಮತ್ತು ಮಹಾತ್ಮರೊಬ್ಬರೊಂದಿಗೆ ನಡೆದಾಡಿದೆವು. ■

## ಪ್ರೀತಿಯ ಸಾಕಾರ ರೂಪ

**ರಾಖೀ ಚೋಪ್ರ; ಅನು: ಸುಧಾಕರ್**

ಗುರೂಜಿಯವರ ಶ್ರೇಷ್ಠತೆಯನ್ನು ಹೋಲಿಸಲಸಾಧ್ಯ. ಗುರೂಜಿಯವರು ನಿಜವಾಗಿಯೂ ಒಂದು ಸ್ಫೂರ್ತಿ, ಒಬ್ಬ ನಿಜವಾದ ಮಾರ್ಗದರ್ಶಿ ಮತ್ತು ಸಮಸ್ತ ಮನುಕುಲಕ್ಕಾಗಿ ದೇವರು ಕಳಿಸಿಕೊಟ್ಟ ಒಬ್ಬ ಮಾಸ್ಟರ್.

ವಿಶ್ವಾಸವನ್ನೇ ಕಳೆದುಕೊಂಡಿದ್ದ ಅನೇಕರಿಗೆ ಗುರೂಜಿಯವರು ವಿಶ್ವಾಸವನ್ನು ತಂದುಕೊಟ್ಟರು. ಅವರು ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಮತ್ತು ಕೊನೆಯಿಲ್ಲದ ಪ್ರೀತಿಯನ್ನು ಕೊಟ್ಟರು. ನಾವು ತಪ್ಪು ಮಾಡಿ ಕೆಳಗೆ ಬೀಳಲೂ ನಮಗೆ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು, ಆದರೆ ಮೇಲಕ್ಕೆ ಎತ್ತಲು ಮತ್ತು ಪುನಃ ನಡೆಯುವಂತೆ ಮಾಡಲು ಯಾವಾಗಲೂ ಪಕ್ಕದಲ್ಲಿಯೇ ಇರುತ್ತಿದ್ದರು. ಅತಿ ಕಷ್ಟಕರವಾದ ಹಾದಿಗಳಲ್ಲಿ ನಾವು ಮುನ್ನಡೆಯಲು ಶಕ್ತಿ ಮತ್ತು ಧೈರ್ಯವನ್ನು ಕೊಡುತ್ತಿದ್ದರು. ಅವರ ವಿದ್ಯಾರ್ಥಿಗಳ ಮೇಲಿನ ಅವರ ಪ್ರೀತಿ ಎಷ್ಟಿತ್ತೆಂದರೆ, ಅವರು ತಮ್ಮ ಮಾನವ ದೇಹ ತೊರೆದ ನಂತರವೂ ನಾವು ನಮ್ಮ ಜೀವನದಲ್ಲಿ ಎಡವದಂತೆ ನಮ್ಮ ಕೈಗಳನ್ನು ಈಗಲೂ ಹಿಡಿದಿದ್ದಾರೆ. ಅವರು ತಮ್ಮ ಜೀವನದ ಕೊನೆಗಳಿಗೆಯವರೆಗೂ ಮನುಕುಲಕ್ಕಾಗಿ ಕೆಲಸಮಾಡಿದರು. ಅವರು ನಿಶ್ಚಯವಾಗಿಯೂ 'ಪ್ರೀತಿಯ ಸಾಕಾರರೂಪ'. ಈ ಮಹಾನ್ ಮಾಸ್ಟರ್‌ಗೆ ನಾವು ಕೊಡಬಹುದಾದ ನಿಜವಾದ ಕಾಣಿಕೆಯೆಂದರೆ 'ಪ್ರೀತಿಯನ್ನು ಅನುಭವಿಸುವುದು ಮತ್ತು ಅಭಿವ್ಯಕ್ತಿಸುವುದು'. ■

## ಗುರೂಜಿ

**ಉಷಾ ಸತೀಶ್ಚಂದ್ರ; ಅನು: ಸ್ವರ್ಣಲತಾ**

ಪ್ರತಿಸಲ ಗುರೂಜಿಯವರನ್ನು ಭೇಟಿ ಆದಾಗಲೂ ನಮ್ಮೊಳಗಿನ ಆಳವಾದ ಕನಸುಗಳು, ಆಸೆಗಳು ಹೊರಹೊಮ್ಮಿ ಚಿಗುರಿ ಪೂರ್ಣಗೊಳ್ಳುತ್ತಿದ್ದವು. ಅವರು ಸೂಕ್ಷ್ಮತೆ ಹಾಗೂ ಘನತೆಯಿಂದ ದೈವತ್ವ ಮತ್ತು ಮನುಷ್ಯತ್ವವನ್ನು ತಮ್ಮಲ್ಲಿ ಒಂದಾಗಿಸಿದ್ದರು. ಅವರೊಂದಿಗೆ ಸಂಪರ್ಕ ಹೊಂದಿರಲು ಎಲ್ಲ ಹಂತಗಳಲ್ಲೂ ತಾಳ್ಮೆಯಿಂದ ಹಾಗೂ ಮೃದುವಾಗಿ ನಮ್ಮನ್ನು ಮುನ್ನಡೆಸುತ್ತಿದ್ದರು. ಅವರ ಲಯಬದ್ಧವಾದ ಹೆಜ್ಜೆಗಳನ್ನು ನಾವು ಅನುಸರಿಸಿಕೊಂಡು ನಡೆದು ಲೌಕಿಕ ಹಾಗೂ ಆಧ್ಯಾತ್ಮಿಕ ಜೀವನಗಳೆರಡರಲ್ಲೂ ಸಮತೋಲನದಿಂದ ಬಾಳುವುದನ್ನು ಪ್ರಯಾಸವಿಲ್ಲದೆ ಕಲಿಸಿದರು.

ಅವರು ತಮ್ಮ ಜೀವನಶೈಲಿ, ಬೋಧನೆ, ದೈವತ್ವ ಮತ್ತು ನಮ್ರತೆಯಿಂದ ಈ ವಿಶ್ವ ಹೊಂದಿರುವ ಎಲ್ಲವನ್ನೂ ಅಭಿವ್ಯಕ್ತಿಸುವ ಮೂಲಕ ಬೆಳಕಿನಯುಗಕ್ಕೆ ಬದಲಾವಣೆಗೊಳ್ಳುವುದಕ್ಕೆ ದಾರಿ ಮಾಡಿದ್ದಾರೆ. ಅವರ ಅನಿಯಮಿತವಾದ ಪ್ರೀತಿ ನಮ್ಮೆಲ್ಲರನ್ನೂ ಎಂದೂ ಕುಗ್ಗದ ಅವರ ಬೆಳಕಿನ ಪ್ರಭೆಯೊಂದಿಗೆ ಅಪ್ಪಿಕೊಂಡಿದೆ. ನಮ್ಮ ಅಂತರಾಳದಲ್ಲಿ ಅವರು ಅಚ್ಚಳಿಯದೆ ಆಳವಾಗಿ ಮೂಡಿದ್ದಾರೆ. ನಮ್ಮಲ್ಲಿ ಅವರು ಜೀವಿಸಿದ್ದಾರೆ ಮತ್ತು ಅವರಿಂದಾಗಿ ನಾವು ಜೀವಿಸುತ್ತಿದ್ದೇವೆ. ಅವರ ಸದಾ ಆಕರ್ಷಿತ, ಅಕ್ಕರೆಯ ಮುಗುಳ್ನಗೆ ಹಾಗೂ ಉತ್ಕೃಷ್ಟ ವ್ಯಕ್ತಿತ್ವವು ವ್ಯಕ್ತಿಯೊಬ್ಬನಲ್ಲಿ ವಿಸ್ಮಯವನ್ನು ಮೂಡಿಸದೆ ಇರಲು ಸಾಧ್ಯವಿಲ್ಲ. ಒಬ್ಬ ಅಧ್ಯಾತ್ಮಿಕ ಮಾರ್ಗದರ್ಶಿ, ಒಬ್ಬ ದಾರ್ಶನಿಕ, ಒಬ್ಬ ಕನಸುಗಾರ, ಒಬ್ಬ ಶಾಶ್ವತ ಮೌಲ್ಯಗಳ ಮಾಸ್ಟರ್ – ಅವರೇ ನಮ್ಮ ಗುರೂಜಿ! ■

## ನನ್ನ ಆಧ್ಯಾತ್ಮಿಕ ತಂದೆ


**ವೈಶಾಲಿ ಜೊಶಿ; ಅನು: ಸುಧಾಕರ್**

ನನ್ನ ಜೀವನದಲ್ಲಿ ನೆಲೆ ಇಲ್ಲವೆಂದೆನಿಸಿದ ಸಮಯದಲ್ಲಿ ಒಂದು ಹೊಸ ಬಾಗಿಲು ತೆರೆದುಕೊಂಡಿತು ಮತ್ತು ನನ್ನ ಆಧ್ಯಾತ್ಮಿಕ ತಂದೆಯಾದ ಗುರೂಜಿಯವರನ್ನು ನನ್ನ ಜೀವನಕ್ಕೆ ತರುವುದರ ಮೂಲಕ ಭಗವಂತನು ನನ್ನ ಮೇಲೆ ಆತನ ಬಹುದೊಡ್ಡ ಅನುಗ್ರಹದ ಮಳೆಗರೆದಿದ್ದಾನೆ. ಈ ಪ್ರೀತಿಯ ತಂದೆಯು ಅನೇಕ ಅವಕಾಶಗಳನ್ನು ನೀಡುತ್ತಾ ನನ್ನದೇ ಆದ ವೇಗದಲ್ಲಿ ನನ್ನ ಪಾಠಗಳನ್ನು ಕಲಿಯಲು ತಾಳ್ಮೆಯಿಂದ ಅನುವು ಮಾಡಿಕೊಟ್ಟರು ಹಾಗೂ ಜೀವನವನ್ನು ಶಾಂತಿ ಮತ್ತು ನೆಮ್ಮದಿಯಿಂದ ಜೀವಿಸುವ ದಾರಿಯನ್ನು ತೋರಿಸಿಕೊಟ್ಟರು.

ಅವರ ಸದೃಢ ಆಸರೆಯ ಸಾಂತ್ವನವು, ನಾನು ಅಚಲವಾಗಿದ್ದುಕೊಂಡು ಯಾವುದೇ ಅಡಚಣೆಯನ್ನು ದಾಟಲು ಅಪಾರವಾದ ಶಕ್ತಿಯನ್ನು ನೀಡಿತು. ಅವರ ಕೃಪೆಯು, ಅತ್ಯಂತ ಪ್ರತಿಕೂಲ ಪರಿಸ್ಥಿತಿಯುಲ್ಲೂ ಅತ್ಯುತ್ತಮವಾದುದನ್ನು ಪಡೆದುಕೊಳ್ಳಲು ಸಹಾಯ ಮಾಡಿತು. ಅವರ ಪ್ರೀತಿಯು ನನ್ನ ಸಂಪೂರ್ಣ ವ್ಯಕ್ತಿತ್ವದ ಬೆಳವಣಿಗೆಯನ್ನು ಪೋಷಿಸಿತು. ಅವರು ಜೀವನವನ್ನು ಸಂಪೂರ್ಣವಾಗಿ ಜೀವಿಸಲು ಕಲಿಸಿದರು ಮತ್ತು ಅವರು ಹೇಳಿಕೊಟ್ಟದ್ದೆಲ್ಲವನ್ನೂ ಜೀವಿಸಿ ನಿರೂಪಿಸಿದರು. ಅವರ ನಡೆ–ನುಡಿಗಳಲ್ಲಿ ಉದಾತ್ತತೆ ಮತ್ತು ನಿಸ್ವಾರ್ಥತೆ ಇರುತ್ತಿತ್ತು. ಅವರು ಎಂದೆಂದಿಗೂ ನನ್ನ ಜೀವನದ ದಾರಿದೀಪವಾಗಿ ಮುಂದುವರೆಯುತ್ತಾರೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |



**ಗುರೂಜಿ ಕೃಷ್ಣಾನಂದ (1939 - 2012)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯುಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8

## ಫೇಸ್ ಬುಕ್ ಮತ್ತು ಇ–ಮೇಲ್‌ಗಳಿಂದ ಸಂಗ್ರಹಿಸಿದ ಗುರೂಜಿಯವರಿಗೆ ಅಭಿವಂದನಾ ಸಂದೇಶಗಳು

ಸಂ : ಶೋಭಾ ಕೆ. ರಾವ್; ಅನು: ವರ್ಷ ದೀಪಕ್

ನನ್ನ ಜೀವಮಾನದಲ್ಲಿ ಈವರೆಗೆ ಭೇಟಿಯಾದ ಅತ್ಯುತ್ತಮ ವ್ಯಕ್ತಿಯೆಂದರೆ ಗುರೂಜಿ. ಕಳೆದ ತಿಂಗಳಷ್ಟೇ ಅವರನ್ನು ಮುಖತಃ ಭೇಟಿಮಾಡಿರುವ ನಾನು ನಿಜಕ್ಕೂ ಪುಣ್ಯಶಾಲಿ. ನಮ್ಮ ಪ್ರೀತಿಯ ಗುರೂಜಿಯವರೇ, ನಿಮ್ಮ ಜೀವನವನ್ನು ತ್ಯಾಗಮಾಡುವುದರ ಮೂಲಕ ನಮಗೆ ನೀಡಿರುವ ಎಲ್ಲದಕ್ಕಾಗಿ ನಿಮಗೆ ಅನಂತಾನಂತ ಧನ್ಯವಾದಗಳು! ನೀವು ಇನ್ನು ಮುಂದೆಯೂ ಎಲ್ಲಿರುವಿರೋ ಅಲ್ಲಿಂದ ನಮ್ಮನ್ನು ಮಾರ್ಗದರ್ಶಿಸುವಿರಿ ಎಂದು ನಿಸ್ಸಂದೇಹವಾಗಿ ನನಗೆ ತಿಳಿದಿದೆ. ನನ್ನ ಜೀವನದಲ್ಲಿ ನಿಮ್ಮ ನಿರೀಕ್ಷೆಯಂತೆ ಬಾಳಲು ಪ್ರಯತ್ನಿಸುತ್ತೇನೆ.

– ಪೂರ್ಣಿಮಾ ಹೆವನ್

ಅವರ ಆತ್ಮಕ್ಕೆ ಶಾಂತಿ ಸಿಗಲಿ! ಗುರೂಜಿಯವರು ಅತ್ಯಂತ ಕರುಣಾಮಯಿಯಾಗಿದ್ದರು. ಎಂದಾದರೂ ನನ್ನಲ್ಲಿ ಪ್ರಶ್ನೆಗಳಿದ್ದರೆ ಅದಕ್ಕೆ ಅವರು ಉತ್ತರಿಸುತ್ತಿದ್ದರು. ನಾನು ಬಹಳ ಭಾಗ್ಯಶಾಲಿಯೆಂದೆನಿಸುತ್ತದೆ ಮತ್ತು ಅಂತಹ ಒಂದು ಉನ್ನತ ಮತ್ತು ದಿವ್ಯಾತ್ಮಕ್ಕೆ ನನ್ನ ನಮನಗಳು.

– ಉಷಾ ರಾಮಚಂದ್ರ ನಾಯರ್

ನನಗೆ ಅವರ ಅಗಲಿಕೆಯು, ಅದರಲ್ಲೂ ಡಿಸೆಂಬರ್ 21 ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ದುಃಖ ಮತ್ತು ಆಘಾತವನ್ನು ಉಂಟುಮಾಡಿದೆ. ನಾನು 2009ರಲ್ಲಿ ಅವರ ಆಶ್ರಮದಲ್ಲಿ ಅವರನ್ನು ಭೇಟಿಯಾಗಿದ್ದೆ; ಅವರ ದಿವ್ಯಪ್ರಭೆಯಿಂದ ಮತ್ತು ಅವರ ಸಂದೇಶಗಳಿಂದ ನಾನು ಆಕರ್ಷಿತನಾದೆ.

– ಸ್ಟೀಫನ್ ಕೆನ್ನಿ

ನನ್ನ ಜೀವನದಲ್ಲಿ ಬೆಳಕಾಗಿದ್ದ ಗುರೂಜಿಯವರಿಗೆ ನನ್ನ ಅಂತರಾಳದಿಂದ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ನೀವು ಈ ಹಿಂದೆಯೇ ಹೇಳಿರುವಂತೆ ನಾವು ಮುಂದಿನ ಕಾಲಚಕ್ರದಲ್ಲಿ ಪುನಃ ಭೇಟಿಯಾಗೋಣ. ಅಲ್ಲಿಯವರೆಗೆ ನಾನು ವೈಯಕ್ತಿಕವಾಗಿ ಬೆಳಕನ್ನು ಹೊಂದಿರುತ್ತೇನೆ ಮತ್ತು ಎಲ್ಲರಿಗೂ ಅದು ತಲುಪುವಂತೆ ಪ್ರಯತ್ನಿಸುತ್ತೇನೆ.

– ಕಿರಣ್ ಸಿಂಗ್

23–11–2012ರಂದು ಬೆಳಗಿನ ನನ್ನ ಧ್ಯಾನದಲ್ಲಿ ಸಪ್ತಋಷಿಗಳು 'ಕೃಷ್ಣಾ' ಎಂದು ಪುನರುಚ್ಚರಿಸುತ್ತಿರುವಾಗ ನಾನು ಗುರೂಜಿಯವರನ್ನು ಕಂಡೆ. ನನಗೆ ಆಶ್ಚರ್ಯವಾಗಿ ಇದರ ಬಗ್ಗೆ ಪತ್ರಬರೆದು ತಿಳಿಸಬೇಕೆಂದುಕೊಂಡೆ. ಆದರೆ ಅದರ ಮೊದಲೇ ನನಗೆ ಈ ಸಮಾಚಾರ ತಿಳಿಯಿತು. ನನ್ನ ಆಂತರ್ಯದ ಪಯಣದಲ್ಲಿ ನನ್ನ ಮಾರ್ಗದರ್ಶಿ ಬೆಳಕಾಗಿದ್ದುದಕ್ಕೆ ನಿಮಗೆ ಧನ್ಯವಾದಗಳು ಗುರೂಜಿ.

– ನೀತಾ ಶರ್ಮಾ

ಗುರೂಜಿ ಕೃಷ್ಣಾನಂದರವರು ನಿಜವಾಗಿಯೂ ಒಬ್ಬ ಸದ್ದಿಲ್ಲದ ಮಾರ್ಗದರ್ಶಕ ಬೆಳಕಾಗಿದ್ದರು. ಅವರು ಸದಾ ಪ್ರಕಾಶಿಸುತ್ತಿರಲಿ ಮತ್ತು ಎಲ್ಲರಿಗೂ ಮಾರ್ಗದರ್ಶಿಯಾಗಿರಲಿ ಎಂದು ಆಶಿಸುತ್ತೇನೆ. ಅವರು ಬರೆದ ಪುಸ್ತಕಗಳು ಸರಳವಾಗಿವೆ ಮತ್ತು ಅವರ ಸಂದೇಶಗಳು ಪ್ರೀತಿಯಿಂದ ತುಂಬಿವೆ.

– ಡಾ॥ ತೃಪ್ತಿ ಜಯಿನ್

ಅವರು ಸದಾ ನಮ್ಮನ್ನು ಮಾರ್ಗದರ್ಶಿಸುತ್ತಾರೆಂದು ನನಗೆ ತಿಳಿದಿದ್ದರೂ, ಈ ಸತ್ಯವನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಅವರೀಗ ಆತ್ಮಸ್ವರೂಪಿಯಾಗಿದ್ದಾರೆಂದು ನಮಗೆ ತಿಳಿದಿದೆ, ಆದರೂ ಅದು ನೋವನ್ನುಂಟುಮಾಡುತ್ತಿದೆ.

– ಚೈತನ್ಯ ಸರ್ಗೊ

ಅವರು ಸಾವನ್ನು ಮೀರಿದವರು – ಅಮರರು. ನಾನು ಅವರನ್ನು ಸದಾ ಪ್ರೀತಿಸುತ್ತೇನೆ!

– ರಾಧಾ ಕೀರ್ತನೆ

ನಿಮ್ಮನ್ನು ಗುರುವಾಗಿ ಪಡೆದಿರುವುದು ನನ್ನ ಅದೃಷ್ಟ; ಕೋಟಿ ಕೋಟಿ ನಮನಗಳು. ನೀವು ಅಮರರೊಂದಿಗೆ ಸಂಪರ್ಕದಲ್ಲಿದ್ದಂತೆ, ನಿಮ್ಮೊಡನೆ ಸಂಪರ್ಕದಲ್ಲಿರುವುದಕ್ಕಾಗಿ ನಾವು ಆಧ್ಯಾತ್ಮಿಕವಾಗಿ ಬೆಳೆಯಲು ನಮ್ಮನ್ನು ಆಶೀರ್ವದಿಸಿ.

– ಧಾರಾ ಬತ್ರಾವಲ್

ನಿಮ್ಮ ಭೌತಿಕ ಉಪಸ್ಥಿತಿಯಿಂದ ನಾವು ವಂಚಿತರಾಗಿದ್ದರೂ, ನಿಮ್ಮೆಡೆಗೆ ನಮ್ಮ ಪ್ರೀತಿ ಮತ್ತು ಗೌರವ ಇನ್ನೂ ಹೆಚ್ಚಾಗಿದೆ ಹಾಗೂ ಇನ್ನು ಮುಂದೆಯೂ ಅದು ಹಾಗೆಯೇ ಇರುತ್ತದೆ. ನಿಮ್ಮ ಅಪ್ಯಾಯಮಾನವಾದ ಆಶೀರ್ವಾದವನ್ನು ನಿರಂತರವಾಗಿ ನಮ್ಮ ಮೇಲೆ ಸುರಿಸುತ್ತಿರಿ.

– ಚಂದ್ರಮೌಳಿ ಭಟ್

ಈ ಪ್ರಪಂಚವನ್ನು ನೋವಿನಿಂದ ರಕ್ಷಿಸಲು ಸಪ್ತಋಷಿಗಳಿಗೆ ನೀವು ಬೇಕಾಗಿದ್ದಿರಬಹುದು. ನೀವು ನಮ್ಮ ಪ್ರಾರ್ಥನೆಗಳಲ್ಲಿ ಸದಾ ನಮ್ಮೊಂದಿಗೆ ಇರುವಿರಿ.

– ಜಾಲಿ ಭಟ್

ಅವರಿನ್ನೂ ಇಲ್ಲೇ ಇದ್ದಾರೆ. ಅವರಿಗೆ ವಿದಾಯ ಹೇಳುವ ಅಗತ್ಯವಿಲ್ಲ.

– ಟಕಹಿರೊ ಜೇಮ್ಸ್ ನಲ ಫ್ರೆಂಡ್

ಬರಿದಾದ ನಿಮ್ಮ ಭೌತಿಕ ಉಪಸ್ಥಿತಿಯನ್ನು ನಾವು ಋಷಿಗಳನ್ನು ಅನುಸರಿಸುವ ಮುಖಾಂತರ ಮಾತ್ರ ತುಂಬಬಹುದು.

– ಸಂದೀಪ್ ಬ್ಯಾನರ್ಜಿ

ಖಂಡಿತವಾಗಿಯೂ ಇದೊಂದು ದುಃಖದ ದಿನ! ನಮ್ಮೆಲ್ಲರನ್ನೂ ಕತ್ತಲಿನಿಂದ ಬೆಳಕಿನೆಡೆಗೆ ಕರೆದೊಯ್ದಂಥ ಅಸಾಧಾರಣ ಆತ್ಮವೊಂದು ಈಗ ಭೌತಿಕ ಶರೀರದ ರೂಪದಲ್ಲಿ ಇಲ್ಲ.

– ಪ್ರಸನ್ನ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ